ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್

Editor : Sundar

ಏಕ ಕಾಲಕ್ಕೆ
ಬಳ್ಳಾರಿ,
ಕೊಪ್ಪಳ,
ಯಾದಗಿರಿ,
ರಾಯಚೂರು,
ಕಲಬುರ್ಗಿ,
ಬೀದರ,
ವಿಜಯನಗರ
ಜಿಲ್ಲೆಗಳಲ್ಲಿ ಪ್ರಕಟ

Volume: 01,	Issue: 298	RNI Number : KNKAN/25/A2770	12-11-2026	Thursday	Page 04,	Price 2/-	suddinimmuru@gmail.com Mob:-8660146563
ಸಂಪುಟ :01	ಸಂಚಿಕೆ:298	ರಾಯಚೂರು	12-11-2026	ಗುರುವಾರ	ಪುಟ 04	ಬೆಲೆ ರೂ.2/-	Postal Reg Number:RCR/L/RNP/117/2026-28

ಅನ್ನದಾತನಿಗೆ ಗುಡ್ ನ್ಯೂಸ್: ಬರ ಪರಿಹಾರ ವಿತರಣೆಯಲ್ಲಿನ ಗೊಂದಲಗಳನ್ನು ಪರಿಹರಿಸಿ ಎಲ್ಲ ಅರ್ಹ ರೈತರಿಗೆ ತಲಾ ₹5 ಸಾವಿರ ನೆರವು

ಬೆಂಗಳೂರು:

ರಾಜ್ಯದಲ್ಲಿ ತೀವ್ರ ಬರಗಾಲದಿಂದಾಗಿ ಸಂಕಷ್ಟಕ್ಕೆ ಸಿಲುಕಿರುವ ರೈತ ಕುಟುಂಬಗಳಿಗೆ ಘೋಷಿಸಿರುವ ಪರಿಹಾರ ವಿತರಣೆಯಲ್ಲಿನ ಗೊಂದಲವನ್ನು ಸರಿಪಡಿಸಿ, ಎಲ್ಲ ಅರ್ಹ ರೈತ ಕುಟುಂಬಗಳಿಗೂ ಬರ ಪರಿಹಾರದ ಹಣ ತಲುಪಿಸಲು ಸರ್ಕಾರ ಬದ್ಧವಾಗಿದೆ. ಪ್ರತಿ ರೈತ ಕುಟುಂಬಕ್ಕೆ ಒಟ್ಟು 5 ಸಾವಿರ ರೂಪಾಯಿ ಪರಿಹಾರ ನೀಡುವ ನಿರ್ಧಾರಕ್ಕೆ ಮುಂದಾಗಿರುವ ಸರ್ಕಾರ, ಮೊದಲ ಹಂತದಲ್ಲಿ 2,500 ರೂ ಹಾಗೂ ಎರಡನೇ ಹಂತದಲ್ಲಿ ಮತ್ತೊಂದು 2,500 ರೂ ನೀಡಲು ಉದ್ದೇಶಿಸಿದೆ.

ಬರ ಪರಿಹಾರ ವಿತರಣೆ ಕುರಿತು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಉಪಮುಖ್ಯಮಂತ್ರಿ ಡಾ. ಜಿ ಪರಮೇಶ್ವರ್ ಅವರು ಇಂದು ಮಾಧ್ಯಮಗಳ ಜೊತೆ ಮಾತನಾಡಿ, ಬರ ಪರಿಹಾರ ವಿತರಣೆಯಲ್ಲಿನ ಗೊಂದಲಗಳನ್ನು ಪರಿಹರಿಸಿ ಎಲ್ಲ ಅರ್ಹ ರೈತ ಕುಟುಂಬಗಳಿಗೆ ತಲಾ 5 ಸಾವಿರ ರೂ ನೆರವು ದೊರಕಿಸುವ ವ್ಯವಸ್ಥೆ ಮಾಡಲಾಗುವುದು ಎಂದು ಭರವಸೆ ನೀಡಿದ್ದಾರೆ.

ವಿಧಾನಸಭೆಯಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಇತ್ತೀಚೆಗೆ ರೈತ ಕುಟುಂಬಗಳಿಗೆ 2,500 ರೂ ಪರಿಹಾರ ನೀಡುವುದಾಗಿ ಘೋಷಿಸಿದ್ದರು. ಆರಂಭದಲ್ಲಿ ಪ್ರತಿ ಎಕರೆಗೆ ಎಂಬ ಅರ್ಥದಲ್ಲಿ ಉಲ್ಲೇಖವಾಗಿದ್ದರಿಂದ ಗೊಂದಲ ಸೃಷ್ಟಿಯಾಗಿತ್ತು. ಬಳಿಕ ಈ ಗೊಂದಲವನ್ನು ಸರಿಪಡಿಸಿ, ರೈತ ಕುಟುಂಬಕ್ಕೆ ಪರಿಹಾರ ನೀಡುವ ಉದ್ದೇಶವನ್ನು ಸ್ಪಷ್ಟಪಡಿಸಲಾಗಿತ್ತು. ಆದರೆ, ಅಧಿಕಾರಿಗಳ ಹಂತದಲ್ಲಿ ಆದೇಶವನ್ನು ತಪ್ಪಾಗಿ ಅರ್ಥೈಸಿಕೊಂಡ ಪರಿಣಾಮ ಪರಿಹಾರ ವಿತರಣೆಯಲ್ಲಿ ವ್ಯತ್ಯಾಸ ಉಂಟಾಗಿದೆ. ಕೆಲವು ರೈತರಿಗೆ 1,500 ರೂ. ಇನ್ನು ಕೆಲವರಿಗೆ 2 ಸಾವಿರ ರೂ ಮಾತ್ರ ಜಮೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಈ ಕುರಿತು ಸದಾಶಿವನಗರದ ತಮ್ಮ ನಿವಾಸದಲ್ಲಿ ಮಾತನಾಡಿದ ಉಪಮುಖ್ಯಮಂತ್ರಿಗಳಾದ ಕಂದಾಯ ಸಚಿವ ಡಾ. ಜಿ. ಪರಮೇಶ್ವರ್, ಅಧಿಕಾರಿಗಳು ಡಿಬಿಟಿ ಮೂಲಕ ಹಣ ವರ್ಗಾವಣೆ ಮಾಡುವಾಗ ಪ್ರತಿ ಎಕರೆಗೆ ಲೆಕ್ಕ ಹಾಕಿರುವ ಸಾಧ್ಯತೆಯಿದೆ. ಎನ್‌ಡಿಆರ್‌ಎಫ್ ಮಾರ್ಗಸೂಚಿಗಳನ್ನು ತಪ್ಪಾಗಿ ಅರ್ಥೈಸಿಕೊಂಡಿರುವುದರಿಂದ ಈ ಸಮಸ್ಯೆ ಎದುರಾಗಿದೆ. ಲೋಪ ಸರಿಪಡಿಸಿ ಅರ್ಹ ರೈತರಿಗೆ ಬಾಕಿ ಮೊತ್ತ ಪಾವತಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.

ಮೊದಲ ಹಂತದಲ್ಲಿ ಸುಮಾರು 50 ಲಕ್ಷ ರೈತ ಕುಟುಂಬಗಳಿಗೆ ತಲಾ 2,500 ರೂ ನೀಡಲು 1,250 ಕೋಟಿ ಅಂದಾಜಿಸಲಾಗಿದೆ. ಎರಡನೇ ಹಂತದಲ್ಲಿಯೂ ಅಷ್ಟೇ ಮೊತ್ತ ಬಿಡುಗಡೆ ಮಾಡುವ ಉದ್ದೇಶವಿದೆ. ಹಣಕಾಸಿನ ಯಾವುದೇ ಸಮಸ್ಯೆಯಿಲ್ಲ. ಹಣಕಾಸು ಇಲಾಖೆಯ ಅನುಮತಿ



ದೊರೆತ ಕೂಡಲೇ ಕಡಿಮೆ ಪಾವತಿಯಾಗಿರುವ ರೈತರಿಗೆ ವ್ಯತ್ಯಾಸದ ಮೊತ್ತವನ್ನು ಪಾವತಿಸಲಾಗುವುದು. ಅಗತ್ಯ ಇದ್ದರೆ ಎರಡನೇ ಕಂತಿನ ಮೊತ್ತದೊಂದಿಗೆ ಹೊಂದಾಣಿಕೆ ಮಾಡಿ ಪಾವತಿಸುವ ಬಗ್ಗೆಯೂ ಪರಿಶೀಲಿಸಲಾಗುವುದು ಎಂದರು.

ಯಾದಗಿರಿ ಜಿಲ್ಲೆಯಲ್ಲಿ ಪ್ರಾಯೋಗಿಕವಾಗಿ ತಿದ್ದುಪಡಿ ಪ್ರಕ್ರಿಯೆ ಆರಂಭಿಸಲಾಗಿದ್ದು, ರಾಜ್ಯದ ಎಲ್ಲ ಜಿಲ್ಲೆಗಳಿಗೂ ವಿಸ್ತರಿಸಲಾಗುವುದು. ಮೊದಲ ಹಂತದ ಪರಿಹಾರ ವಿತರಣೆ ಪೂರ್ಣಗೊಂಡ ಬಳಿಕ ಅರ್ಹ ಫಲಾನುಭವಿಗಳ ನಿಖರ ಮಾಹಿತಿ ಲಭ್ಯವಾಗಲಿದೆ. ನಂತರ ಎರಡನೇ ಹಂತದ 2,500 ರೂ ವಿತರಿಸಲಾಗುವುದು ಎಂದು ಹೇಳಿದರು.

ಇದೇ ವೇಳೆ ಕೇಂದ್ರ ಸರ್ಕಾರದಿಂದ ಎನ್‌ಡಿಆರ್‌ಎಫ್ ಅಡಿ ಬರ ಪರಿಹಾರ ಪಡೆಯಲು ರಾಜ್ಯ ಸರ್ಕಾರ ಕಾಯುತ್ತಿದೆ. ಈ ಸಂಬಂಧ ಕೇಂದ್ರಕ್ಕೆ ಪತ್ರ ಬರೆದು ಎರಡು ವಾರಗಳಿಗೂ ಹೆಚ್ಚು ಸಮಯ ಕಳೆದಿದ್ದರೂ ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ಕೇಂದ್ರದಿಂದ ಸಮಯ ದೊರೆತ ಕೂಡಲೇ ಸರ್ವಪಕ್ಷ ನಿಯೋಗವನ್ನು ದೆಹಲಿಗೆ ಕರೆದೊಯ್ಯುವ ಬಗ್ಗೆ ನಿರ್ಧರಿಸಲಾಗುವುದು ಎಂದು ಪರಮೇಶ್ವರ್ ತಿಳಿಸಿದರು.

ಕೇಂದ್ರ ಸರ್ಕಾರ ರಾಜ್ಯಕ್ಕೆ ನ್ಯಾಯಯುತ ಆರ್ಥಿಕ ನೆರವು ಮತ್ತು ಅನುದಾನದ ಪಾಲು ನೀಡಿದ್ದರೆ ರಾಜ್ಯದ ಮೇಲೆ ಇಷ್ಟೊಂದು ಆರ್ಥಿಕ ಹೊರೆ ಬೀಳುತ್ತಿರಲಿಲ್ಲ. ಬೆಲೆ ಏರಿಕೆಯ ಅನಿವಾರ್ಯತೆಯೂ ಎದುರಾಗುತ್ತಿರಲಿಲ್ಲ. ರೈತರಿಗೆ ಕೃಷಿ ಪರಿಕರಗಳ ಬೆಲೆ ಏರಿಕೆಯಿಂದ ತೊಂದರೆಯಾಗುತ್ತಿದ್ದು, ಹಾಲಿನ ಉತ್ಪಾದನೆಯೂ ಕಡಿಮೆಯಾಗಿದೆ. ಹಾಲು ಉತ್ಪಾದಕರಿಗೆ ಸೂಕ್ತ ಬೆಲೆ ನೀಡುವುದು ಸರ್ಕಾರದ ಜವಾಬ್ದಾರಿಯಾಗಿದೆ ಎಂದು ಸಮರ್ಥಿಸಿಕೊಂಡರು.

ಒಟ್ಟಿನಲ್ಲಿ, ಬರ ಪರಿಹಾರ ಘೋಷಣೆಯ ನಂತರ ವಿತರಣೆಯಲ್ಲಿ ಉಂಟಾಗಿರುವ ಲೋಪ ಸರಿಪಡಿಸಿ, ಅರ್ಹ ರೈತ ಕುಟುಂಬಗಳಿಗೆ ಪೂರ್ಣ ಮೊತ್ತ ತಲುಪಿಸುವುದು ಸರ್ಕಾರದ ಮುಂದಿರುವ ಸವಾಲಾಗಿದೆ. ಮೊದಲ ಹಂತದ ಹಣ ವಿತರಣೆಯಲ್ಲಿನ ಗೊಂದಲ ನಿವಾರಣೆಯಾದ ಬಳಿಕ ಎರಡನೇ ಹಂತದ ಪರಿಹಾರ ವಿತರಣೆ ನಡೆಯಲಿದೆ.

ರಾಯಚೂರಿನಲ್ಲಿ ಟಿಪ್ಪು ಸುಲ್ತಾನ್ ಜಯಂತಿ ಆಚರಣೆ



ರಾಯಚೂರು: ನಗರದ ಅರಬ್ ಮೊಹಲ್ಲಾ ಸಮೀಪದ ಟಿಪ್ಪು ಸುಲ್ತಾನ್ ವೃತ್ತದಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿ ಹಾಗೂ ಜಿಲ್ಲಾ ಟಿಪ್ಪು ಸುಲ್ತಾನ್ ಸಮಿತಿಯ ವತಿಯಿಂದ ಟಿಪ್ಪು ಸುಲ್ತಾನ್ ಜಯಂತಿಯನ್ನು ಆಚರಿಸಲಾಯಿತು.

ಈ ಸಂದರ್ಭದಲ್ಲಿ ಗಣ್ಯರು ಟಿಪ್ಪು ಸುಲ್ತಾನ್ ಅವರ ನಾಮಫಲಕಕ್ಕೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು. ಬಳಿಕ ಸಾರ್ವಜನಿಕರಿಗೆ ಸಿಹಿ ಹಂಚಿ ಸಂಭ್ರಮಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಕೆ. ಶಾಂತಪ್ಪ ಮಾತನಾಡಿ, ಟಿಪ್ಪು ಸುಲ್ತಾನ್ ಸ್ವಾತಂತ್ರ್ಯ ಹೋರಾಟಗಾರ ಹಾಗೂ ಅಪ್ಪಟ ದೇಶಪ್ರೇಮಿಯಾಗಿದ್ದರು. ಆಡಳಿತದಲ್ಲಿ ಹಲವು ಸುಧಾರಣೆಗಳನ್ನು ಜಾರಿಗೆ ತರುವ ಮೂಲಕ ಮಾದರಿಯಾಗಿದ್ದಾರೆ. ದೇಶಕ್ಕಾಗಿ ಪ್ರಾಣತ್ಯಾಗ ಮಾಡಿದ್ದಲ್ಲದೆ, ತಮ್ಮ ಮಕ್ಕಳನ್ನೂ ಒತ್ತೆಯಾಳುಗಳಾಗಿ ನೀಡಿದ್ದರು. ಕೆಲವರು ಅವರ ವಿರುದ್ಧ ಇಲ್ಲಸಲ್ಲದ ಆರೋಪಗಳನ್ನು ಮಾಡಿ ಅಪಪ್ರಚಾರ ನಡೆಸುತ್ತಿದ್ದಾರೆ. ಏನೇ ಮಾಡಿದರೂ ಅವರ ಸಾಧನೆಗಳನ್ನು ಮರೆಮಾಚಲು ಸಾಧ್ಯವಿಲ್ಲ.

ಮೂರನೇಯ ಪುಟಕ್ಕೆ

ರಾಯಚೂರಿನಲ್ಲಿ ಪ್ರತ್ಯೇಕ ನಾಲ್ಕು ಅಗ್ನಿ ಅವಘಡ : ಅಪಾರ ಹಾನಿ

ರಾಯಚೂರು: ನಗರದಲ್ಲಿ ಮೂರು ಹಾಗೂ ಗ್ರಾಮೀಣ ಪ್ರದೇಶದಲ್ಲಿ ಒಂದು ಸೇರಿದಂತೆ ಪ್ರತ್ಯೇಕ ನಾಲ್ಕು ಅಗ್ನಿ ಅವಘಡಗಳು ಸೋಮವಾರ ಸಂಜೆ ಸಂಭವಿಸಿವೆ. ಈ ಘಟನೆಗಳಲ್ಲಿ ನಾಯಿಯೊಂದು ಮೃತಪಟ್ಟಿದ್ದು, ಸುಮಾರು 60 ಸಾವಿರ ರೂ. ಮೌಲ್ಯದ ಮೇವು ಸುಟ್ಟುಹೋಗಿದೆ.

ನಗರದ ಮಾರ್ಕೆಟ್ ಯಾರ್ಡ್ ಪೊಲೀಸ್ ಠಾಣೆ ವ್ಯಾಪ್ತಿಯ ಸಾಯಿ ರೆಸಿಡೆನ್ಸಿ ಯಲ್ ಅಪಾರ್ಟ್‌ಮೆಂಟ್‌ನ ಕೆಳಭಾಗದಲ್ಲಿರುವ ಮಳಿಗೆಯಲ್ಲಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಕಾಣಿಸಿಕೊಂಡಿದೆ. ಘಟನೆಯಲ್ಲಿ ಮಳಿಗೆಯಲ್ಲಿದ್ದ ಲ್ಯಾಪ್‌ಟಾಪ್, ಪ್ರಿಂಟರ್, ವೈದ್ಯಕೀಯ ಬಳಕೆಯ ಹತ್ತಿ ಸೇರಿದಂತೆ ಇತರ ವಸ್ತುಗಳು ಬೆಂಕಿಗೆ



ಆಹುತಿಯಾಗಿವೆ. ಮಾಹಿತಿ ತಿಳಿದು ಸ್ಥಳಕ್ಕೆ ಆಗಮಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಿ ಹೆಚ್ಚಿನ ಅನಾಹುತ ತಪ್ಪಿಸಿದ್ದಾರೆ. ಘಟನೆಯಲ್ಲಿ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ.

ನಗರದ ಮಾಣಿಕಪ್ರಭು ಬಡಾವಣೆಯ ಮನೆಯೊಂದರಲ್ಲಿ ಇನ್‌ವರ್ಟರ್‌ನಿಂದ ಶಾರ್ಟ್ ಸರ್ಕ್ಯೂಟ್ ಉಂಟಾಗಿ, ಅದರ ಸುತ್ತ ಮುತ್ತಲಿನ ವಸ್ತುಗಳಿಗೆ ಹಾನಿಯಾಗಿದೆ. ಆದರೆ, ಹೆಚ್ಚಿನ ನಷ್ಟ ಸಂಭವಿಸಿಲ್ಲ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮಂತ್ರಾಲಯ ರಸ್ತೆಯ ಸಮೀಪದಲ್ಲಿರುವ ಮತ್ತೊಂದು ಮನೆಯಲ್ಲಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಕಾಣಿಸಿಕೊಂಡಿದೆ. ಘಟನೆಯಲ್ಲಿ ಮನೆಯಲ್ಲಿದ್ದ ನಾಯಿಯೊಂದು ಬೆಂಕಿಗೆ ಆಹುತಿಯಾಗಿ ಮೃತಪಟ್ಟಿದೆ. ಘಟನೆ ನಡೆದ ಸಂದರ್ಭದಲ್ಲಿ ಮನೆಯಲ್ಲಿ ಯಾರೂ ಇರಲಿಲ್ಲ ಎಂದು ತಿಳಿದುಬಂದಿದೆ. ಈ ಘಟನೆ ಪಶ್ಚಿಮ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ತಾಲ್ಲೂಕಿನ ಮಾಸದೊಡ್ಡಿ ಗ್ರಾಮದಲ್ಲಿ ಟ್ರ್ಯಾಕ್ಟರ್‌ಗೆ ಜೋಡಿಸಿದ್ದ ಟ್ರಾಲಿಯಲ್ಲಿ ಭತ್ತದ ಹುಲ್ಲು ಸಾಗಿಸುತ್ತಿದ್ದಾಗ ವಿದ್ಯುತ್ ತಂತಿ ತಗುಲಿ ಬೆಂಕಿ ಕಾಣಿಸಿಕೊಂಡಿದೆ. ಪರಿಣಾಮ ಟ್ರಾಲಿಯಲ್ಲಿದ್ದ ಹುಲ್ಲು ಸಂಪೂರ್ಣ ಸುಟ್ಟುಹೋಗಿದೆ. ಟ್ರಾಲಿಯ ಮೇಲೆ ಕುಳಿತಿದ್ದ ಇಬ್ಬರು ತಕ್ಷಣ ಎಚ್ಚೆತ್ತುಕೊಂಡು ಕೆಳಗಿಳಿದು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಸ್ಥಳಕ್ಕೆ ಆಗಮಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಿದ್ದಾರೆ. ಘಟನೆಯಲ್ಲಿ ಸುಮಾರು 60 ಸಾವಿರ ರೂ. ಮೌಲ್ಯದ ಮೇವು ನಷ್ಟವಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಇಡಪನೂರು: ರಸ್ತೆಯ ಅಭಿವೃದ್ಧಿ ಅನುದಾನ ದುರ್ಬಳಕೆ ತನಿಖೆಗೆ ಒತ್ತಾಯ



ರಾಯಚೂರು,ನ.11-ತಾಲೂಕಿನ ಇಡಪನೂರು ಗ್ರಾಮದ ರಸ್ತೆ ಕಾಮಗಾರಿ ಹಾಗೂ ಸೇತುವೆ ನಿರ್ಮಾಣ ಕಾಮಗಾರಿ ಬಿಡುಗಡೆಯಾದ ಅನುದಾನ ದುರ್ಬಳಕೆ ಮಾಡಿಕೊಂಡ ಅಧಿಕಾರಿಗಳನ್ನು ಸೇವೆಯಿಂದ ವಜಾಗೊಳಿಸಿ ಕಾಮಗಾರಿ ತನಿಖೆ ಒಳಪಡಿಸಬೇಕು ಎಂದು ಮೆಥೋಡಿಸ್ಟ್ ಚರ್ಚಿಯ ಪ್ಯಾಸ್ಟರ್

ಯೋಹನ್ ಅವರು ಒತ್ತಾಯಿಸಿದರು.

ಅವರಿಂದು ನಗರದ ಸುದ್ದಿಗಾರರೊಂದಿಗೆ ಮಾತನಾಡಿ,2025-26 ನೇ ಸಾಲಿನ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆಯಡಿ ರಾಯಚೂರು ತಾಲೂಕಿನ ಇಡಪನೂರು ಗ್ರಾಮದಿಂದ ಮೀರಾಪುರ ಗ್ರಾಮಕ್ಕೆ ಹೋಗುವ ರಸ್ತೆ ಕಾಮಗಾರಿ ಹಾಗೂ ಸೇತುವೆ ನಿರ್ಮಾಣ ಕಾಮಗಾರಿಗೆ ಬಿಡುಗೆಯಾದ ಅನುದಾನ 70 ಲಕ್ಷ ಅನುದಾನವನ್ನು ಕ.ಆರ್.ಐ.ಡಿ.ಎಲ್ ಉಪ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಇಇ ಮೊಹಮ್ಮದ್ ಸೋಯಿಲ್, ಎಇಇ ಸತೀಶ್ ರೆಡ್ಡಿ ಜೆ.ಇ. ರಾಜೇಶ್ ರೆಡ್ಡಿ ಗುತ್ತೇದಾರರು ಅವರು ದುರ್ಬಳಿಕೆ ಮಾಡಿಕೊಂಡು ಸರಕಾರಕ್ಕೆ ನಷ್ಟ ಉಂಟು ಮಾಡಿದ್ದಾರೆ ಎಂದು ಆರೋಪಿಸಿದರು. ಅನುದಾನವನ್ನು ದುರ್ಬಳಕೆ ಮಾಡಿಕೊಂಡಿರುವ ಹಿನ್ನಲೆಯಲ್ಲಿ ಐಪಿಸಿ ಸೆಕ್ಷನ್ 409 ರ ಅಡಿಯಲ್ಲಿ ಗಂಭೀರ ಅಪರಾಧ ಎಂದು ಪರಿಗಣಿಸಿ 10 ವರ್ಷ ಜೈಲು ಶಿಕ್ಷೆಗೆ ಗುರಿಪಡಿಸಿ ಮತ್ತು ದಂಡವಿಧಿಸಲು ಜೀವಾವಧಿ ಶಿಕ್ಷೆಗೆ ಅವಕಾಶವಿರುವದರಿಂದ ತಾವುಗಳು ಇವರ ಮೇಲೆ ಸೂಕ್ತ ಕ್ರಮ ಕೈಗೊಂಡು ಕೂಡಲೇ ಸೇವೆಯಿಂದ ವಜಾಗೊಳಿಸಿ ಕಾಮಗಾರಿ ತನಿಖೆಗೊಳಪಡಿಸಬೇಕೆಂದು ಒತ್ತಾಯಿಸಿದರು.

ಓಬವ್ವ ನಮ್ಮೆಲ್ಲರಿಗೂ ಸದಾ ಸ್ಫೂರ್ತಿದಾಯಕ-ಅಪರ ಜಿಲ್ಲಾಧಿಕಾರಿ ಸೋಮಲಿಂಗ

ರಾಯಚೂರು, ನ. 11-ಇತಿಹಾಸದ ಪುಟಗಳಲ್ಲಿ ಸಾಹಸ, ತ್ಯಾಗ ಮತ್ತು ಬಲಿದಾನದ ಸಂಕೇತವಾಗಿರುವ ವೀರರಾಣಿ ಒಣಕೆ ಓಬವ್ವ ನಮ್ಮೆಲ್ಲರಿಗೂ ಸದಾ ಸ್ಫೂರ್ತಿದಾಯಕವಾಗಿದೆ ಎಂದು ಅಪರ ಜಿಲ್ಲಾಧಿಕಾರಿಗಳಾದ ಸೋಮಲಿಂಗ ಗೋಪಾಲ ಗೆಣ್ಣೂರು ಅವರು ಹೇಳಿದರು.

ಅವರಿಂದು ನಗರದ ಪಂಡಿತ ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ವೀರರಾಣಿ ಒನಕೆ ಓಬವ್ವ ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಅವರು ಮಾತನಾಡಿದರು.

ಚಿತ್ರದುರ್ಗದ ಮದಕರಿ ನಾಯಕನ ಆಸ್ಥಾನದ ಇತಿಹಾಸವು ನಮ್ಮೆಲ್ಲರಿಗೂ ಸದಾ ಸ್ಫೂರ್ತಿದಾಯಕವಾಗಿದೆ. ಹೈದರಾಲಿ ಸೇನೆಯು ಚಿತ್ರದುರ್ಗದ ಕೋಟೆಯನ್ನು ಭೇದಿಸಲು ಎರಡು-ಮೂರು ಬಾರಿ ಪ್ರಯತ್ನಿಸಿದರೂ ಯಶಸ್ವಿಯಾಗಿರಲಿಲ್ಲ. ಕೊನೆಗೆ ಕಳ್ಳಮಾರ್ಗದಿಂದ ಕೋಟೆಯೊಳಗೆ ನುಗ್ಗಿ ವಿಜಯ ಸಾಧಿಸಲು ಹೈದರಾಲಿ ಮಾಡಿದ ಕುತಂತ್ರವನ್ನು ಓಬವ್ವ ಧೈರ್ಯದಿಂದ ಮೆಟ್ಟಿನಿಂತಳು. ಊಟದ ವೇಳೆ ಕೋಟೆಯ ಕಾವಲುಗಾರ ಮುದ್ದಹನುಮಪ್ಪನಿಗೆ ಕಾವಲು ಕಾಯುವ



ಜವಾಬ್ದಾರಿಯಿದ್ದಾಗ, ಒಳಗೆ ನುಗ್ಗುತ್ತಿದ್ದ ಶತ್ರು ಸೈನಿಕರನ್ನು ಒಬ್ಬೊಬ್ಬರಾಗಿ ಒಣಕೆಯಿಂದ ಹೊಡೆದುರುಳಿಸಿ, ಕೋಟೆಯನ್ನು ಮತ್ತು ಸಾಮ್ರಾಜ್ಯವನ್ನು ರಕ್ಷಿಸಿದ ಆಕೆಯ ಸಾಹಸಗಾಥೆ ರೋಮಾಂಚನಕಾರಿಯಾಗಿದೆ ಎಂದರು.

ಒಬ್ಬ ಮಹಿಳೆ ತನ್ನ ಪ್ರಾಣವನ್ನೇ ಪಣಕ್ಕಿಟ್ಟು ನಾಡನ್ನು ರಕ್ಷಿಸಿದ ಆ ಶೌರ್ಯವು ಇಂದಿನ ಹೆಣ್ಣುಮಕ್ಕಳಿಗೆ ಧೈರ್ಯ ಮತ್ತು ಆತ್ಮವಿಶ್ವಾಸದ ಪ್ರತೀಕವಾಗಿದೆ. ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ ನೇತೃತ್ವದ ಸಂವಿಧಾನವು ಇಂದು ಎಲ್ಲರಿಗೂ ಸಮಾನತೆ ಮತ್ತು ಸಮಾನ ಅವಕಾಶಗಳನ್ನು ಕಲ್ಪಿಸಿಕೊಟ್ಟಿದ್ದು, ಇಂತಹ ವೀರಮಾತೆಯರ ಆದರ್ಶಗಳನ್ನು ಮೈಗೂಡಿಸಿಕೊಂಡು ಮಹಿಳೆಯರು ಮುನ್ನಡೆಯಬೇಕಿದೆ ಎಂದರು.

ಹೆಣ್ಣುಮಕ್ಕಳು ಎಲ್ಲಾ ಕ್ಷೇತ್ರಗಳಲ್ಲಿಯೂ ಧೈರ್ಯದಿಂದ ಮುನ್ನಡೆಯಬೇಕು. ಮತ್ತು ಕಾನೂನುಗಳು ಹಾಗೂ ಸರ್ಕಾರದ ಸೌಲಭ್ಯಗಳನ್ನು ಸರಿಯಾಗಿ ಬಳಕೆ ಮಾಡಿಕೊಳ್ಳಬೇಕು.ಪ್ರತಿಯೊಬ್ಬ ಹೆಣ್ಣು ಮಗಳೂ ಸಹ ಧೈರ್ಯವನ್ನುಮೈಗೂಡಿಸಿಕೊಂಡು ಸಮಾಜದಲ್ಲಿ ಮುಂಚೂಣಿಗೆ ಬರಬೇಕೆಂದರು.

ಈ ವೇಳೆ ರಾಯಚೂರು ತಹಶಿಲ್ದಾರ್ ಸುರೇಶ್ ವರ್ಮಾ ಅವರು ಮಾತನಾಡಿ, ದೇಶ ರಕ್ಷಣೆಗಾಗಿ ಒನಕೆಯನ್ನೇ

ಮೂರನೇಯ ಪುಟಕ್ಕೆ

ಬಡವರ ಮನೆಯಲ್ಲಿ ದೀಪಾವಳಿ ಆಚರಿಸಿದ ಚಿತ್ರನಟಿ ಡಾ. ಪೂಜಾ

ರಾಯಚೂರು: ಸಾಮಾನ್ಯವಾಗಿ ಹಬ್ಬದ ಸಂಭ್ರಮವನ್ನು ಐಷಾರಾಮಿ ಮನೆಗಳಲ್ಲಿ, ಅದ್ಧೂರಿ ಅಲಂಕಾರಗಳ ನಡುವೆ ಆಚರಿಸುವುದನ್ನು ಕಾಣುತ್ತೇವೆ. ಆದರೆ, ಬೆಂಗಳೂರಿನ ಡಾಲರ್ಸ್ ಕಾಲೋನಿಯ ಐಷಾರಾಮಿ ಬದುಕನ್ನು ಬದಿಗಿಟ್ಟು ರಾಯಚೂರಿನ ಆಶ್ರಯ ಕಾಲೋನಿಯ ಬಡ ಕುಟುಂಬವೊಂದರ ಪುಟ್ಟ ಮನೆಯಲ್ಲಿ ವಾಸ್ತವ್ಯ ಮಾಡಿ, ಅವರೊಂದಿಗೆ ದೀಪಾವಳಿ ಹಬ್ಬ ಆಚರಿಸುವ ಮೂಲಕ ಚಿತ್ರನಟಿ ಹಾಗೂ ಸಮಾಜಸೇವಕಿ ಡಾ. ಪೂಜಾ ರಮೇಶ್ ಮಾನವೀಯತೆ ಮತ್ತು ಸರಳತೆಯನ್ನು ಮೆರೆದಿದ್ದಾರೆ.



ರಾಯಚೂರು ನಗರದ ವಾರ್ಡ್ ನಂ. 28ರ ಹೊಸ ಆಶ್ರಯ ಕಾಲೋನಿಯ ಎಪಿಎಂಸಿ ಮಾರುಕಟ್ಟೆಯಲ್ಲಿ ಹಮಾಲಿ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿರುವ ಸೈಕಲ್ ರಾಮಣ್ಣ ಅವರ ಮನೆಗೆ ಭೇಟಿ ನೀಡಿದ ಡಾ. ಪೂಜಾ ರಮೇಶ್, ಅವರ ಕುಟುಂಬದೊಂದಿಗೆ ದೀಪಾವಳಿ ಹಬ್ಬದ ಸಂಭ್ರಮ ಹಂಚಿಕೊಂಡರು. ರಾಮಣ್ಣ, ಅವರ ಪತ್ನಿ ಬಸ್ಸಮ್ಮ ಹಾಗೂ ಮಕ್ಕಳೊಂದಿಗೆ ಆತ್ಮೀಯವಾಗಿ ಬೆರೆತು, ಮಕ್ಕಳ ಜತೆ ಪಟಾಕಿ ಸಿಡಿಸಿ, ಮನೆಯ ಪುಟ್ಟ ಅಂಗಳದಲ್ಲಿ ದೀಪಗಳನ್ನು ಬೆಳಗಿಸುವ ಮೂಲಕ ಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಿದರು.

ಸಮಾಜದಲ್ಲಿ ಎಷ್ಟೇ ದೊಡ್ಡ ಸ್ಥಾನಮಾನ, ಹೆಸರು ಹಾಗೂ ಜನಪ್ರಿಯತೆ ಗಳಿಸಿದರೂ ಸಾಮಾನ್ಯ ಜನರೊಂದಿಗೆ ಬೆರೆಯುವ ಗುಣವೇ ವ್ಯಕ್ತಿಯ ನಿಜವಾದ ದೊಡ್ಡತನವನ್ನು ತೋರಿಸುತ್ತದೆ ಎಂಬುದಕ್ಕೆ ಡಾ. ಪೂಜಾ ರಮೇಶ್ ಅವರ ಈ ನಡೆ ಸಾಕ್ಷಿಯಾಯಿತು. ಯಾವುದೇ ಆಡಂಬರ, ಅಹಂಕಾರವಿಲ್ಲದೆ ಬಡ ಕುಟುಂಬದ ಮನೆಗೆ ತೆರಳಿ ಅವರೊಂದಿಗೆ ಸಮಯ ಕಳೆದ ಅವರು, ಆ ಕುಟುಂಬದ ಸದಸ್ಯರಲ್ಲೊಬ್ಬರಂತೆ ಬೆರೆತು ಆತ್ಮೀಯತೆ ತೋರಿದರು.

ರಾಮಣ್ಣ ಮತ್ತು ಬಸ್ಸಮ್ಮ ತಮ್ಮ ಮನೆಯ ಪರಿಸ್ಥಿತಿಯ ನಡುವೆಯೂ ಪ್ರೀತಿಯಿಂದ ನಟಿಯನ್ನು ಸ್ವಾಗತಿಸಿ, ಮನೆಯಲ್ಲಿಯೇ ಸಿದ್ಧಪಡಿಸಿದ ಊಟವನ್ನು ಪ್ರೀತಿಯಿಂದ ಉಣಬಡಿಸಿದರು. ಅವರ ಪ್ರೀತಿಯ ಆತಿಥ್ಯವನ್ನು ಸ್ವೀಕರಿಸಿದ ಡಾ. ಪೂಜಾ ರಮೇಶ್, ಆಶ್ರಯ ಕಾಲೋನಿಯ ಪುಟ್ಟ ಟಿನ್‌ಶೆಡ್ ಮನೆಯಲ್ಲಿ ರಾತ್ರಿ ವಾಸ್ತವ್ಯ ಮಾಡುವ ಮೂಲಕ ತಮ್ಮ ಸರಳ ವ್ಯಕ್ತಿತ್ವವನ್ನು ಮತ್ತೊಮ್ಮೆ ಸಾಬೀತುಪಡಿಸಿದರು.

ಸಾಮಾನ್ಯವಾಗಿ ಸಿನಿಮಾ ಕ್ಷೇತ್ರದ ಗಣ್ಯರು ಹಾಗೂ ಕಲಾವಿದರು ಐಷಾರಾಮಿ ಹೋಟೆಲ್‌ಗಳು, ವಿಶೇಷ ಆತಿಥ್ಯಕ್ಕೆ ಆದ್ಯತೆ ನೀಡುವ ಸಂದರ್ಭದಲ್ಲಿ, ಬಡ ಕುಟುಂಬವೊಂದರ ಪುಟ್ಟ ಮನೆಯಲ್ಲಿ ಉಳಿದುಕೊಂಡು ಅವರೊಂದಿಗೆ ಹಬ್ಬ ಆಚರಿಸಿರುವುದು ವಿಶೇಷ ಗಮನ ಸೆಳೆಯಿತು. ಹಬ್ಬವೆಂದರೆ ಕೇವಲ ಹೊಸ ಬಟ್ಟೆ, ಸಿಹಿ ತಿಂಡಿ, ಪಟಾಕಿ ಮತ್ತು ಬೆಳಕಿನ ಸಂಭ್ರಮವಷ್ಟೇ ಅಲ್ಲ; ನಮ್ಮ ಸುತ್ತಮುತ್ತಲಿನವರೊಂದಿಗೆ ಸಂತೋಷ ಹಂಚಿಕೊಳ್ಳುವುದು, ಸಂಕಷ್ಟದಲ್ಲಿರುವವರ ಮುಖದಲ್ಲಿ ನಗು ಮೂಡಿಸುವುದೂ ಹಬ್ಬದ ನಿಜವಾದ ಅರ್ಥ ಎಂಬ ಸಂದೇಶವನ್ನು ಅವರು ತಮ್ಮ ನಡೆ ಮೂಲಕ ಸಾರಿದರು.

ರಾಯಚೂರು ಜಿಲ್ಲೆಗೆ ಈ ಮೊದಲು ಹಲವು ಬಂದಿದ್ದಾರೆ ಆದರೆ ಈ ಬಡಾವಣೆಗೆ ಮೊದಲ ಬಾರಿಗೆ ಆಗಮಿಸಿದ ಡಾ. ಪೂಜಾ ರಮೇಶ್ ಅವರನ್ನು ಎಲ್‌ಬಿಎಸ್ ನಗರದ ಅಭಿಮಾನಿಗಳು ಹಾಗೂ ಸಾರ್ವಜನಿಕರು ಆತ್ಮೀಯವಾಗಿ ಸ್ವಾಗತಿಸಿದರು. ಅವರ ಸರಳ ನಡೆ, ಮಾನವೀಯ ಗುಣ ಮತ್ತು ಸಮಾಜಸೇವಾ ಮನೋಭಾವಕ್ಕೆ ಸಾರ್ವಜನಿಕರು ಮೆಚ್ಚುಗೆ ವ್ಯಕ್ತಪಡಿಸಿದರು.

ಬಡ ಕುಟುಂಬದ ಮನೆಯಲ್ಲಿ ದೀಪಾವಳಿ ಆಚರಿಸುವ ಮೂಲಕ ಆ ಮನೆಯ ಮಕ್ಕಳಿಗೆ ವಿಶೇಷ ಸಂತೋಷ ನೀಡಿದ್ದಲ್ಲದೆ, ಕುಟುಂಬದ ಸದಸ್ಯರಿಗೆ ಮರೆಯಲಾಗದ ಹಬ್ಬದ ಅನುಭವವನ್ನು ಉಡುಗೊರೆಯಾಗಿ ನೀಡಿದರು.

ಡಾ. ಪೂಜಾ ರಮೇಶ್ ಅವರು ಕೇವಲ ಚಿತ್ರನಟಿಯಾಗಿ ಗುರುತಿಸಿಕೊಳ್ಳದೆ, ಸಮಾಜದ ವಿವಿಧ ಸಮಸ್ಯೆಗಳಿಗೆ ಸ್ಪಂದಿಸುವ ಸಮಾಜಸೇವಕಿಯಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕನ್ನಡ ಶಾಲೆಗಳ ಉಳಿವು ಮತ್ತು ಅಭಿವೃದ್ಧಿಗಾಗಿ ಹೋರಾಟ ನಡೆಸುತ್ತಿದ್ದು, ಮಹಿಳೆಯರು ಹಾಗೂ ಸಂಕಷ್ಟದಲ್ಲಿರುವ ಮಕ್ಕಳ ಸಮಸ್ಯೆಗಳ ಬಗ್ಗೆ ವಿಶೇಷ ಕಾಳಜಿ ವಹಿಸಿ ಹಲವು ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಶಿಕ್ಷಣದಿಂದ ವಂಚಿತರಾಗಬಾರದು, ಮಕ್ಕಳಲ್ಲಿರುವ ಪ್ರತಿಭೆಗೆ ಸೂಕ್ತ ವೇದಿಕೆ ದೊರೆಯಬೇಕು ಎಂಬ ಆಶಯದೊಂದಿಗೆ ವಿವಿಧ ಚಟುವಟಿಕೆಗಳನ್ನು ನಡೆಸುತ್ತಿದ್ದಾರೆ.

ಇದಕ್ಕೂ ಮೊದಲು ರಾಯಚೂರು ನಗರದಲ್ಲಿ ಚಿಂದಿ ಆಯುವ ಮಕ್ಕಳ ಪ್ರತಿಭೆಯನ್ನು ಗುರುತಿಸಿ, ಅವರಿಗೆ ಸಮಾಜದ ಮುಂದೆ ತಮ್ಮ ಸಾಮರ್ಥ್ಯ ಪ್ರದರ್ಶಿಸಲು ಅವಕಾಶ ಕಲ್ಪಿಸುವ ಉದ್ದೇಶದಿಂದ ಚಿಂದಿ ಸ್ಟಾರ್ಸ್ ಎಂಬ ವಿನೂತನ ಕಾರ್ಯಕ್ರಮ ಆಯೋಜಿಸಿದ್ದರು. ಸಾಮಾನ್ಯವಾಗಿ ಸಮಾಜದಿಂದ ನಿರ್ಲಕ್ಷ್ಯಕ್ಕೆ ಒಳಗಾಗುವ ಮಕ್ಕಳಿಗೆ ದೊಡ್ಡ ವೇದಿಕೆ ಕಲ್ಪಿಸುವ ಮೂಲಕ ಅವರಲ್ಲಿಯೂ ಪ್ರತಿಭೆ, ಕನಸು ಮತ್ತು ಸಾಧಿಸುವ ಛಲವಿದೆ ಎಂಬುದನ್ನು

75 ಲಕ್ಷ ರೂ. ಪಡೆದಿರುವುದು ಸಾಬೀತುಪಡಿಸಿ, ಇಲ್ಲದಿದ್ದರೆ ಸುಮ್ಮನಿರಲ್ಲ : ಎಚ್‌ಡಿಕೆಗೆ ಸಚಿವ ಶಿವಲಿಂಗೇಗೌಡ ಸವಾಲು



ಹಾಸನ :

ಜಿಲ್ಲಾಧಿಕಾರಿ ವರ್ಗಾವಣೆ ಹಾಗೂ ಹಣದ ವ್ಯವಹಾರಕ್ಕೆ ಸಂಬಂಧಿಸಿದಂತೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಮಾಡಿರುವ ಆರೋಪಗಳು ಜಿಲ್ಲಾ ರಾಜಕೀಯದಲ್ಲಿ ಹೊಸ ಸಂಘರ್ಷಕ್ಕೆ ನಾಂದಿ ಹಾಡಿವೆ. ಆರೋಪಗಳಿಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿರುವ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ, ತಮ್ಮ ವಿರುದ್ಧದ 75 ಲಕ್ಷ ರೂ. ಹಣ ಪಡೆದಿರುವ ಆರೋಪವನ್ನು ಸಾಬೀತುಪಡಿಸುವಂತೆ ಕುಮಾರಸ್ವಾಮಿ ಅವರಿಗೆ ಬಹಿರಂಗ ಸವಾಲು ಹಾಕಿದ್ದಾರೆ.

ನಗರದ ಹಾಸನಾಂಬ ದೇವಾಲಯದ ಆವರಣದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಸಚಿವರು ಇತ್ತೀಚೆಗೆ ಸುದ್ದಿಗೋಷ್ಠಿ ನಡೆಸಿ ಇಬ್ಬರ ನಡುವಿನ ಸಂಭಾಷಣೆಯ ಚಾಟ್ ಬಿಡುಗಡೆ ಮಾಡಿದ್ದಾರೆ. ಅದರಲ್ಲಿ ಜಿಲ್ಲಾಧಿಕಾರಿ ಅವರ ಆಪ್ತ ಸಹಾಯಕ ಶಶಿಕಿರಣ್ ಅವರ ಹೆಸರು ಪ್ರಸ್ತಾಪಿಸಿದ್ದು, ಇತರ ವ್ಯಕ್ತಿಗಳ ಕುರಿತು ಸ್ಪಷ್ಟ ಮಾಹಿತಿ ಇಲ್ಲ. ರಾತ್ರಿ ಚಾಟ್ ತಂದುಕೊಟ್ಟರು ಎಂಬ ಆರೋಪವನ್ನೂ ಮಾಡಿದ್ದಾರೆ. ಆದರೆ ಇಂದಿನ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನದ ಕಾಲದಲ್ಲಿ ಯಾರ ಹೆಸರಿನಲ್ಲಾದರೂ ಇಂತಹ ಸಂಭಾಷಣೆಗಳನ್ನು ಸೃಷ್ಟಿಸುವ ಸಾಧ್ಯತೆಯಿದೆ. ಹೀಗಾಗಿ ಯಾವುದೇ ದಾಖಲೆ ಬಿಡುಗಡೆ ಮಾಡುವ ಮುನ್ನ ಅದರ ವಿಶ್ವಾಸಾರ್ಹತೆಯನ್ನು ಪರಿಶೀಲಿಸುವುದು ಅತ್ಯಗತ್ಯ ಎಂದರು. ಕೇಂದ್ರ ಸಚಿವರಂತಹ ಜವಾಬ್ದಾರಿಯುತ ಸ್ಥಾನದಲ್ಲಿರುವವರು ಆಧಾರರಹಿತ ಮಾಹಿತಿಯನ್ನು ಸಾರ್ವಜನಿಕವಾಗಿ ಬಿಡುಗಡೆ ಮಾಡುವುದು ಸರಿಯಲ್ಲ. ಈ ಮಾಹಿತಿ ನಿಮಗೆ ಯಾರು ನೀಡಿದ್ದಾರೆ ಎಂಬುದನ್ನು ಬಹಿರಂಗಪಡಿಸಿ. ಆರೋಪದ ಸತ್ಯಾಸತ್ಯತೆ ಪರಿಶೀಲಿಸಿ ಮಾತನಾಡಬೇಕಿತ್ತು. ಮುಂದೆ ಈ ಆರೋಪಗಳು ಸುಳ್ಳು ಎಂದು ಸಾಬೀತಾದರೆ ನಿಮ್ಮ ಘನತೆ ಮತ್ತು ಗೌರವಕ್ಕೆ ಧಕ್ಕೆಯಾಗುವುದಿಲ್ಲವೇ ಎಂದು ಪ್ರಶ್ನಿಸಿದರು.

ಎಚ್.ಡಿ. ಕುಮಾರಸ್ವಾಮಿ ಅವರೊಂದಿಗೆ ಸುಮಾರು 20 ವರ್ಷ ರಾಜಕೀಯವಾಗಿ ಒಟ್ಟಿಗೆ ಇದ್ದುದನ್ನು ಸ್ಮರಿಸಿದ ಶಿವಲಿಂಗೇ ಗೌಡ, ನಾನು ನಿಮ್ಮೊಂದಿಗೆ ಇದ್ದಾಗ ನಿಮಗೆ ಅಗೌರವ ತರುವಂತಹ ಯಾವುದೇ ಕೆಲಸ ಮಾಡಿಲ್ಲ.

ಈಗ ಸಚಿವನಾಗಿದ್ದೇನೆ ಎಂಬ ಕಾರಣಕ್ಕೆ ಹೊಟ್ಟೆಕಿಚ್ಚಿನಿಂದ ಇಂತಹ ಆರೋಪ ಮಾಡುತ್ತಿದ್ದೀರಾ ಎಂಬ ನೋವು ಕಾಡುತ್ತಿದೆ. ಹಾಸನಾಂಬೆ ಉತ್ಸವವನ್ನು ಅತ್ಯಂತ ಅಚ್ಚುಕಟ್ಟಾಗಿ ನಿರ್ವಹಿಸಿದ್ದೇನೆ. ನಮ್ಮಂತಹ ಬಡವರ ಮಕ್ಕಳ ಮೇಲೆ ಇಂತಹ ಆರೋಪಗಳನ್ನು ಏಕೆ ಮಾಡುತ್ತಿದ್ದೀರಿ? ನಾವು ನಿಮಗೆ ಯಾವ ತೊಂದರೆಯನ್ನೂ ಕೊಟ್ಟಿಲ್ಲ ಎಂದು ಭಾವುಕರಾಗಿ ಹೇಳಿದರು.

ಕುಮಾರಸ್ವಾಮಿ ಅವರದ್ದು ಯಾವಾಗಲೂ ಹಿಟ್ ಅಂಡ್ ರನ್ ರಾಜಕಾರಣವಾಗಿದೆ. ವಿಧಾನಸಭೆಯಲ್ಲಿ ಎರಡು ಬಾರಿ ಪೆನ್‌ಡ್ರೈವ್ ತೋರಿಸಿದ್ದನ್ನು ನೋಡಿದ್ದೇನೆ. ಆದರೆ ಅದರಲ್ಲಿರುವ ಅಂಶಗಳನ್ನು ಸಂಪೂರ್ಣವಾಗಿ ಬಹಿರಂಗಪಡಿಸಿದ್ದೀರಾ?

ಈಗಲೂ ಆರೋಪಗಳನ್ನು ಮಾಡುತ್ತೀರಿ, ಆದರೆ ಅವುಗಳ ಸತ್ಯಾಸತ್ಯತೆ ಕುರಿತು ಸ್ಪಷ್ಟನೆ ನೀಡುವುದಿಲ್ಲ.

ಮಾನಹಾನಿ ಮಾಡುವಂತಹ ಪ್ರವೃತ್ತಿಯನ್ನು ಬಿಡಬೇಕು ಎಂದು ತೀಕ್ಷ್ಣವಾಗಿ ಹೇಳಿದರು. ಚಾಟ್‌ನಲ್ಲಿ ಹೆಸರು ಪ್ರಸ್ತಾಪವಾಗಿರುವ ಜಿಲ್ಲಾಧಿಕಾರಿ ಅವರ ಆಪ್ತ ಸಹಾಯಕ ಶಶಿಕಿರಣ್ ಸ್ವತಃ ಪೊಲೀಸ್ ಠಾಣೆಗೆ ತೆರಳಿ ದೂರು ನೀಡಿದ್ದಾರೆ. ತಮ್ಮ ಮೊಬೈಲ್ ಫೋನ್‌ನ್ನು ಪೊಲೀಸರಿಗೆ ಒಪ್ಪಿಸಿ, ಯಾವುದೇ ತನಿಖೆಗೂ ಸಿದ್ಧವಿರುವುದಾಗಿ ತಿಳಿಸಿದ್ದಾರೆ. ಹೀಗಿರುವಾಗ ತನಿಖೆ ಪೂರ್ಣಗೊಳ್ಳುವ ಮೊದಲೇ ಆರೋಪಗಳನ್ನು ಸತ್ಯವೆಂಬಂತೆ ಬಿಂಬಿಸುವುದು ಸರಿಯಲ್ಲ. ತನಿಖೆಯಿಂದ ನಿಜಾಂಶ ಹೊರಬರಲಿ ಎಂದರು.

ಪತ್ರಿಕೆ ಓದುವ ಹವ್ಯಾಸ ಬೆಳೆಸಿಕೊಳ್ಳಿ

ಮೀರಾಪೂರದಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಬಸನಗೌಡ ದದ್ದಲ್ ಭೂಮಿಪೂಜೆ



ರಾಯಚೂರು:

ರಾಯಚೂರು ಗ್ರಾಮೀಣ ಕ್ಷೇತ್ರದ ಶಾಸಕ ಬಸನಗೌಡ ದದ್ದಲ್ ಅವರು ಮೀರಾಪೂರ ಗ್ರಾಮದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಿದರು.

ಪ್ರಗತಿಪಥ ಯೋಜನೆಯಡಿ ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆ () ಇಲಾಖೆಯಿಂದ ಮೀರಾಪೂರದಿಂದ ಇಡಪನೂರುವರೆಗೆ ₹2.55 ಕೋಟಿ ವೆಚ್ಚದಲ್ಲಿ ಬಿಟಿ ರಸ್ತೆ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಲಾಯಿತು.

ಅದೇ ರೀತಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಕೆಆರ್‌ಡಿಬಿ) ಮ್ಯಾಕ್ರೋ ಯೋಜನೆಯಡಿ ₹4.50 ಕೋಟಿ ವೆಚ್ಚದಲ್ಲಿ ಸಿಸಿ ರಸ್ತೆ, ಸೇತುವೆ ಹಾಗೂ ಇಡಪನೂರಿನಿಂದ ಗುಂಜಳ್ಳಿವರೆಗೆ ಬಿಟಿ ರಸ್ತೆ ನಿರ್ಮಾಣ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆ () ವತಿಯಿಂದ ಭೂಮಿಪೂಜೆ ನೆರವೇರಿಸಲಾಯಿತು.

ಈ ಸಂದರ್ಭದಲ್ಲಿ ಗ್ರಾಮದ ಹಿರಿಯ ಮುಖಂಡರು, ಸುತ್ತಮುತ್ತಲಿನ ಗ್ರಾಮಗಳ ಮುಖಂಡರು, ಗ್ರಾಮಸ್ಥರು, ನಾಮನಿರ್ದೇಶಿತ ಸದಸ್ಯರು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಸರ್‌ಸಿ.ವಿ.ರಾಮನ್‌ರ 138ನೇ ಜನ್ಮದಿನಾಚರಣೆ

ವಿಜ್ಞಾನ ಕ್ಷೇತ್ರದಲ್ಲಿ 'ಬೆಳಕು' ಮೂಡಿಸಿದ ರಾಮನ್



ಕಲಬುರಗಿ: ವಿಜ್ಞಾನ ಕ್ಷೇತ್ರದಲ್ಲಿ 'ಬೆಳಕು' ಮೂಡಿಸುವ ಮೂಲಕ ಸರ್.ಸಿ.ವಿ.ರಾಮನ್ ಇಡೀ ವಿಶ್ವವೇ ಭಾರತದೆಡೆಗೆ ತಿರುಗಿ ನೋಡುವ ಅದ್ಭುತ ಸಾಧನೆ ಮಾಡಿದ್ದಾರೆ. ಅವರ ಸಂಶೋಧನೆಯಾದ 'ರಾಮನ್ ಪರಿಣಾಮ'ವು ಸಮುದ್ರದ ನೀಲಿ ಬಣ್ಣಕ್ಕೆ ಬೆಳಕಿನ ಚದುರುವಿಕೆಯ ಕಾರಣವೆಂದು ತೋರಿಸಿತು. ಈ ಸಂಶೋಧನೆಗೆ ವಿಶ್ವದ ಶ್ರೇಷ್ಠ ಪ್ರಶಸ್ತಿಯಾದ ನೋಬಲ್ ಪಾರಿತೋಷಕವನ್ನು 1930ರಲ್ಲಿ ಪಡೆದು ನಮ್ಮ ದೇಶದ ಕೀರ್ತಿಯನ್ನು ವಿಶ್ವದೆಲ್ಲೆಡೆ ಪಸರಿಸುವಂತೆ ಮಾಡಿದರು. 'ಏಷ್ಯಾ ಖಂಡದಲ್ಲಿಯೇ ನೋಬೆಲ್ ಪ್ರಶಸ್ತಿ ಪಡೆದ ಪ್ರಥಮ ವಿಜ್ಞಾನಿ' ಎಂಬ ಹೆಗ್ಗಳಿಕೆ ಇವರದಾಗಿದೆ ಎಂದು ಉಪನ್ಯಾಸಕ ಎಚ್.ಬಿ. ಪಾಟೀಲ ಅಭಿಮತಪಟ್ಟರು.

ನಗರದ ಖಾದ್ರಿ ಚೌಕ್ ಹತ್ತಿರವಿರುವ 'ಸಕ್ಸಸ್ ಕಂಪ್ಯೂಟರ ತರಬೇತಿ ಕೇಂದ್ರ'ದಲ್ಲಿ 'ಬಸವೇಶ್ವರ ಸಮಾಜ ಸೇವಾ ಬಳಗ'ದ ವತಿಯಿಂದ ಜರುಗಿದ 'ಸರ್ ಸಿ.ವಿ.ರಾಮನ್‌ರ 138ನೇ ಜನ್ಮದಿನಾಚರಣೆ'ಯ ಕಾರ್ಯಕ್ರಮದಲ್ಲಿ ಭಾವಚಿತ್ರಕ್ಕೆ ಪುಷ್ಪನಮನಗಳನ್ನು ಸಲ್ಲಿಸಿ ಅವರು ಮಾತನಾಡುತ್ತಿದ್ದರು. ಯಾವುದೇ ರಾಷ್ಟ್ರದ ಅಭಿವೃದ್ಧಿ, ಆ ರಾಷ್ಟ್ರದ ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆಯ ಮೇಲೆ ನಿಂತಿದೆ.

ಮೊದಲ ದಿನವೇ 155 ಕೋಟಿ ರೂ. ಗಳಿಸಿದ 'ರಾಮಾಯಣ: ಪಾರ್ಟ್ ಒನ್'



ನವದೆಹಲಿ, ಭಾರತೀಯ ಪೌರಾಣಿಕ ಮಹಾಕಾವ್ಯ ರಾಮಾಯಣ ಆಧಾರಿತ ಬಹುನಿರೀಕ್ಷಿತ 'ರಾಮಾಯಣ: ಪಾರ್ಟ್ ಒನ್' ಚಿತ್ರವು ವಿಶ್ವಾದ್ಯಂತ ಬಾಕ್ಸ್ ಆಫೀಸ್‌ನಲ್ಲಿ ಭರ್ಜರಿ ಆರಂಭ ಕಂಡಿದೆ. ಬಿಡುಗಡೆಯಾದ ಮೊದಲ ದಿನವೇ ಜಾಗತಿಕ ಮಟ್ಟದಲ್ಲಿ ಒಟ್ಟು 155 ಕೋಟಿ ರೂ. ಗಳಿಕೆ ಮಾಡಿದೆ ಎಂದು ಚಿತ್ರತಂಡ ತಿಳಿಸಿದೆ.

ನಿತೇಶ್ ತಿವಾರಿ ನಿರ್ದೇಶನದ ಈ ಚಿತ್ರ ನವೆಂಬರ್ 5ರಂದು ವಿಶ್ವದಾದ್ಯಂತ ತೆರೆಕಂಡಿದೆ. ಚಿತ್ರದಲ್ಲಿ ರಣಬೀರ್ ಕಪೂರ್ ಶ್ರೀರಾಮನಾಗಿ, ಸಾಯಿ ಪಲ್ಲವಿ ಸೀತೆಯಾಗಿ, ಯಶ್ ರಾವಣನಾಗಿ ಹಾಗೂ ರವಿ ದುಬೆ ಲಕ್ಷ್ಮಣನಾಗಿ ಅಭಿನಯಿಸಿದ್ದಾರೆ.

ಚಿತ್ರತಂಡದ ಬಿಡುಗಡೆ ಹೇಳಿಕೆಯ ಪ್ರಕಾರ, ಭಾರತೀಯ ಚಿತ್ರರಂಗದ ಇತಿಹಾಸದಲ್ಲೇ ದೀಪಾವಳಿ ಹಬ್ಬಕ್ಕೂ ಮುನ್ನ ಬಿಡುಗಡೆಯಾದ ಚಿತ್ರಗಳ ಪೈಕಿ 'ರಾಮಾಯಣ' ಮೊದಲ ದಿನದ ಅತಿ ಹೆಚ್ಚು ಗಳಿಕೆ ದಾಖಲಿಸಿದೆ. ಜಾಗತಿಕ ಬಾಕ್ಸ್ ಆಫೀಸ್‌ನಲ್ಲಿ ಅದ್ಭುತ ಆರಂಭ ಕಂಡಿರುವ 'ರಾಮಾಯಣ' ಮೊದಲ ದಿನವೇ ವಿಶ್ವಾದ್ಯಂತ 155 ಕೋಟಿ ರೂ. ಒಟ್ಟು ಗಳಿಕೆ ಮಾಡಿದೆ. ಈ ಮೂಲಕ ಭಾರತೀಯ ಚಿತ್ರರಂಗದಲ್ಲಿ ದೀಪಾವಳಿ ಪೂರ್ವದ ಅತಿ ಹೆಚ್ಚು ಮೊದಲ ದಿನದ ಗಳಿಕೆ ಮಾಡಿದ ಚಿತ್ರ ಎಂಬ ದಾಖಲೆ ನಿರ್ಮಿಸಿದೆ ಎಂದು ಚಿತ್ರತಂಡ ತಿಳಿಸಿದೆ. ಸಾಮಾನ್ಯವಾಗಿ ದೀಪಾವಳಿ ಪೂರ್ವದ ದಿನಗಳಲ್ಲಿ ಹಬ್ಬದ ಸಿದ್ಧತೆ ಹಾಗೂ ಪ್ರಯಾಣದ ಕಾರಣದಿಂದ ಚಿತ್ರಮಂದಿರಗಳಿಗೆ ಬರುವ ಪ್ರೇಕ್ಷಕರ ಸಂಖ್ಯೆ ಕಡಿಮೆಯಾಗುವ ಸಾಧ್ಯತೆ ಇರುತ್ತದೆ. ಆದರೂ ಬೆಳಗಿನ ಪ್ರದರ್ಶನಗಳಿಂದಲೇ ಚಿತ್ರಮಂದಿರಗಳಲ್ಲಿ ಪ್ರೇಕ್ಷಕರ ಉತ್ತಮ ಹಾಜರಾತಿ ಕಂಡುಬಂದಿದ್ದು, ಇದು ಚಿತ್ರದ ಭರ್ಜರಿ ಆರಂಭಕ್ಕೆ ಕಾರಣವಾಗಿದೆ ಎಂದು ನಿರ್ಮಾಪಕರು ತಿಳಿಸಿದ್ದಾರೆ.

'ರಾಮಾಯಣ: ಪಾರ್ಟ್ ಒನ್' ಭಾರತೀಯ ಮಹಾಕಾವ್ಯವನ್ನು ಆಧರಿಸಿ ಎರಡು ಭಾಗಗಳಲ್ಲಿ ನಿರ್ಮಿಸಲಾಗುತ್ತಿರುವ ಸಿನಿಮಾದ ಮೊದಲ ಭಾಗವಾಗಿದೆ. ನಮಿತ್ ಮಲ್ಹೋತ್ರಾ ಅವರ ಪ್ರೈಮ್ ಫೋಕಸ್ ಸ್ಟುಡಿಯೋಸ್ ಮತ್ತು ಯಶ್ ಅವರ ಮಾನ್ಸ್ಟರ್ ಮೈಂಡ್ ಕ್ರಿಯೇಷನ್ಸ್ ಸಹಯೋಗದಲ್ಲಿ ಚಿತ್ರವನ್ನು ನಿರ್ಮಿಸಿದೆ.

ವಿಜ್ಞಾನ ಕ್ಷೇತ್ರದಲ್ಲಿ ಸಾಧನೆ ಮಾಡಿ ನೊಬೆಲ್ ಪ್ರಶಸ್ತಿ ಪಡೆದ ಸರ್ ಸಿ.ವಿ. ರಾಮನ್: ಡಾ. ದಂಡಪ್ಪ ಬಿರಾದಾರ



ರಾಯಚೂರು: ವಿಜ್ಞಾನ ಕ್ಷೇತ್ರದಲ್ಲಿ ಮಹತ್ತರ ಸಾಧನೆ ಮಾಡಿ ಜಗತ್ಪಸಿದ್ಧ ನೊಬೆಲ್ ಪ್ರಶಸ್ತಿ ಪಡೆದ ಸರ್ ಸಿ.ವಿ. ರಾಮನ್ ಅವರ ಸಾಧನೆ ಪ್ರತಿಯೊಬ್ಬರಿಗೂ ಮಾದರಿಯಾಗಿದೆ ಎಂದು ಕನ್ನಡ ಕಲಾ ಶಿಕ್ಷಕರು ಹಾಗೂ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಶಿಕ್ಷಣ ವಿಭಾಗದ ಜಿಲ್ಲಾ ಸಂಚಾಲಕರಾದ ಡಾ. ದಂಡಪ್ಪ ಬಿರಾದಾರ ಹೇಳಿದರು. ರಾಯಚೂರು ತಾಲೂಕಿನ ಉಡಮಗಲ್ ಖಾನಾಪುರ ಸರ್ಕಾರಿ ಪ್ರೌಢ ಶಾಲೆಯಲ್ಲಿ ನ.7ರಂದು ಆಯೋಜಿಸಿದ್ದ ಸರ್ ಸಿ.ವಿ. ರಾಮನ್ ಜಯಂತಿ ಕಾರ್ಯಕ್ರಮದಲ್ಲಿ ಸಸಿಗೆ ನೀರುಣಿಸುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.ಭೌತ ವಿಜ್ಞಾನ ಕ್ಷೇತ್ರದಲ್ಲಿ ಮಹತ್ತರ ಸಂಶೋಧನೆ ನಡೆಸಿದ ಸರ್ ಸಿ.ವಿ. ರಾಮನ್ ಅವರು ರಾಮನ್ ಪರಿಣಾಮದ ಸಂಶೋಧನೆಯ ಮೂಲಕ ಜಗತ್ತಿನ ಗಮನ ಸೆಳೆದರು. ವಿಜ್ಞಾನ ಕ್ಷೇತ್ರದಲ್ಲಿನ ಅವರ ಸಾಧನೆಗೆ ನೊಬೆಲ್ ಪ್ರಶಸ್ತಿ ಲಭಿಸಿದ್ದು, ದೇಶದ ಹೆಮ್ಮೆಯ ವಿಜ್ಞಾನಿಯಾಗಿ ಗುರುತಿಸಿಕೊಂಡಿದ್ದಾರೆ. ಅವರ ಸಾಧನೆಯನ್ನು ಸ್ಮರಿಸುವ ಉದ್ದೇಶದಿಂದ ಪ್ರತಿವರ್ಷ ಫೆ.28ರಂದು ರಾಷ್ಟ್ರೀಯ ವಿಜ್ಞಾನ ದಿನ ಆಚರಿಸಲಾಗುತ್ತದೆ ಎಂದು ತಿಳಿಸಿದರು. ಶಾಲೆಯ ಮುಖ್ಯ ಗುರು ವೀರೇಶ್ ಅಂಗಡಿ ಮಾತನಾಡಿ, ಸರ್ ಸಿ.ವಿ. ರಾಮನ್ ಅವರು 1904ರಲ್ಲಿ ಪದವಿ ಹಾಗೂ 1907ರಲ್ಲಿ ಸ್ನಾತಕೋತ್ತರ ಪದವಿ ಪೂರ್ಣಗೊಳಿಸಿದರು. ನಂತರ ವಿಜ್ಞಾನ ಕ್ಷೇತ್ರದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ, ಭೌತಶಾಸ್ತ್ರದಲ್ಲಿ ಅಮೂಲ್ಯ ಕೊಡುಗೆ ನೀಡಿದರು. ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿ ವಿಜ್ಞಾನ ಕ್ಷೇತ್ರಕ್ಕೆ ಮಹತ್ವದ ಕೊಡುಗೆ ನೀಡಿದರು ಎಂದು ಹೇಳಿದರು.ವಿದ್ಯಾರ್ಥಿನಿ ಮೇಘನಾ ಮಾತನಾಡಿ, ಬೆಳಕು ವಸ್ತುವಿನ ಮೂಲಕ ಹಾದುಹೋದಾಗ ಅದರ ಬಣ್ಣದಲ್ಲಿ ಉಂಟಾಗುವ ಬದಲಾವಣೆಯನ್ನು ರಾಮನ್ ಪರಿಣಾಮದ ಮೂಲಕ ವಿವರಿಸಬಹುದು. ತಂದೆ ಚಂದ್ರಶೇಖರ ಅಯ್ಯರ್ ಹಾಗೂ ತಾಯಿ ಪಾರ್ವತಿ ಅವರ ಮಾರ್ಗದರ್ಶನದಲ್ಲಿ ಉತ್ತಮ ಶಿಕ್ಷಣ ಪಡೆದ ರಾಮನ್ ಅವರು ವಿಶ್ವಪ್ರಸಿದ್ಧ ವಿಜ್ಞಾನಿಯಾದರು ಎಂದು ತಿಳಿಸಿದರು. ಪಲ್ಲವಿ ಸ್ವಾಗತಿಸಿದರು. ಶಾಲೆಯ ವಿಜ್ಞಾನ ಶಿಕ್ಷಕಿ ಅನಿತಾ ಎನ್. ಕಾರ್ಯಕ್ರಮದ ಪ್ರಾಸ್ತಾವಿಕವಾಗಿ ಮಾತನಾಡಿ ಅಚ್ಚುಕಟ್ಟಾಗಿ ಆಯೋಜಿಸಿದರು. ಕೊನೆಯಲ್ಲಿ ವಂದಿಸಿದರು. ಈ ಸಂದರ್ಭದಲ್ಲಿ ಶಿಕ್ಷಕಿಯರಾದ ನಫೀಜಾ ಅಂಜುಮ್, ವೀಣಾ ಕುಲಕರ್ಣಿ, ಪದ್ಮ ಕೆ., ಸರಸ್ವತಿ, ಪದ್ಮಾವತಿ ಸೇರಿದಂತೆ ಶಾಲೆಯ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ರಾಯಚೂರಿನಲ್ಲಿ ಪರಿಸರ ಸ್ನೇಹಿ ದೀಪಾವಳಿ ಆಚರಣೆ ಕುರಿತು ಜಾಗೃತಿ ಕಾರ್ಯಕ್ರಮ ಆಯೋಜನೆ



ರಾಯಚೂರು.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಪ್ರಾದೇಶಿಕ ಕಚೇರಿ ರಾಯಚೂರು ಹಾಗೂ ಮುನ್ನೂರುಕಾಪು ಶಿಕ್ಷಣ ಸಂಸ್ಥೆಯ ಸಂಯುಕ್ತಾಶ್ರಯದಲ್ಲಿ ''ದೀಪಾವಳಿ ಹಬ್ಬವನ್ನು ಬೆಳಕಿನ ಹಬ್ಬವಾಗಿ ಮತ್ತು ಪರಿಸರ ಸ್ನೇಹಿಯಾಗಿ ಆಚರಣೆ'' ಕುರಿತು 07.ನವೆಂಬರ್.2026 ರಂದು ಮುನ್ನೂರುಕಾಪು ಶಿಕ್ಷಣ ಸಂಸ್ಥೆಯಲ್ಲಿ ವಿಶೇಷವಾಗಿ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಾದೇಶಿಕ ಪರಿಸರ ಅಧಿಕಾರಿಗಳಾದ ಬಿ.ಕೆ. ಸಂತೋಷ್ ಅವರು, ಈ ಬಾರಿಯ ದೀಪಾವಳಿಯನ್ನು ಆದಷ್ಟು ದೀಪಗಳನ್ನು ಬೆಳಗಿಸುವ ಮೂಲಕ ಮಾಲಿನ್ಯರಹಿತವಾಗಿ ಆಚರಿಸಬೇಕು. ನಿಷೇಧಿತ ಪಟಾಕಿಗಳನ್ನು ಸಿಡಿಸುವುದರಿಂದ ಶಬ್ದ, ವಾಯು ಹಾಗೂ ಘನತ್ಯಾಜ್ಯ ಉತ್ಪಾದನೆಯಾಗಿ ಪರಿಸರ ಮಾಲಿನ್ಯ ಹೆಚ್ಚಾಗುತ್ತದೆ. ಹಸಿರು ಪಟಾಕಿಗಳನ್ನು ಮಾತ್ರ ಬಳಸಬೇಕು ಮತ್ತು ಅವುಗಳನ್ನು ಬಳಸುವಾಗ ಪ್ರಾಣಿ-ಪಕ್ಷಿಗಳು, ಮಕ್ಕಳು ಹಾಗೂ ವೃದ್ಧರಿಗೆ ತೊಂದರೆಯಾಗದಂತೆ ಎಚ್ಚರಿಕೆ ವಹಿಸಬೇಕು ಎಂದರು.

ಆಸ್ಪತ್ರೆಗಳು, ಶಿಕ್ಷಣ ಸಂಸ್ಥೆಗಳ ಹಾಸ್ಟೆಲ್‌ಗಳು, ವೃದ್ಧಾಶ್ರಮಗಳು ಹಾಗೂ ಇತರ ನಿಷೇಧಿತ ಪ್ರದೇಶಗಳಲ್ಲಿ ಪಟಾಕಿ ಸಿಡಿಸುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಪಟಾಕಿ ಹೊಗೆಯಿಂದ ಅಸ್ತಮಾ ರೋಗಿಗಳು, ಹೃದ್ರೋಗಿಗಳು ಹಾಗೂ ಚಿಕ್ಕ ಮಕ್ಕಳ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟುಮಾಡುತ್ತದೆ. ರಾಷ್ಟ್ರೀಯ ಹಸಿರು ಪ್ರಾಧಿಕಾರ ಹಾಗೂ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ ಸಿ.ಎಸ್.ಐ.ಆರ್. (ಅಖ) ಮತ್ತು ನೀರಿ (ಓಇಇಖ) ಲಾಂಛನ ಹಾಗೂ ಕ್ಯೂಆರ್ ಕೋಡ್ ಹೊಂದಿರುವ ಹಸಿರು ಪಟಾಕಿಗಳನ್ನು ಮಾತ್ರ ಉಪಯೋಗಿಸಬೇಕು. ರಾತ್ರಿ 8:00 ಗಂಟೆಯಿಂದ 10:00 ಗಂಟೆಯವರೆಗೆ ಮಾತ್ರ ಪಟಾಕಿ ಸಿಡಿಸಲು ಅವಕಾಶವಿದ್ದು, ರಾತ್ರಿ 10:00 ನಂತರ ಪಟಾಕಿ ಸಿಡಿಸಬಾರದು ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು. ಮಾಲಿನ್ಯ ನಿಯಂತ್ರಣ ಮಂಡಳಿಯ ವೈಜ್ಞಾನಿಕ ಸಹಾಯಕ ಪ್ರವೀಣ್ ಕುಮಾರ್ ಅವರು ಮಾತನಾಡಿ, ದೀಪಾವಳಿಯು ಸಂತೋಷ ಹಾಗೂ ಸೌಹಾರ್ದತೆಯ ಸಂಕೇತವಾಗಿದ್ದರೂ, ಪಟಾಕಿಗಳಿಂದ ವಾತಾವರಣಕ್ಕೆ ಬಿಡುಗಡೆಯಾಗುವ ಹಾನಿಕಾರಕ ಅನಿಲಗಳ ಕುರಿತು ಮಾಹಿತಿ ನೀಡಿ. ಪಟಾಕಿಯಿಂದ ಬಿಡುಗಡೆಯಾಗುವ ಸಲ್ಫರ್ ಡೈಆಕ್ಸೈಡ್ (ಔ) ಉಸಿರಾಟದ ತೊಂದರೆ, ಕೆಮ್ಮು ಮತ್ತು ಗಂಟಲಿನ ಕಿರಿಕಿರಿ ಉಂಟು ಮಾಡುತ್ತದೆ ಹಾಗೂ ನೈಟ್ರೋಜನ್ ಡೈಆಕ್ಸೈಡ್ (ಓಔ) ಶ್ವಾಸಕೋಶದ ಮೇಲೆ ದುಷ್ಪರಿಣಾಮ ಬೀರುತ್ತದೆ. ಇದರೊಂದಿಗೆ ಒ2.5 ಹಾಗೂ ಒ10 ಸೂಕ್ಷ್ಮ ಧೂಳಿನ ಕಣಗಳು ಗಾಳಿಯಲ್ಲಿ ಹೆಚ್ಚಾಗಿ ಮಕ್ಕಳು, ವೃದ್ಧರು ಹಾಗೂ ಅಸ್ತಮಾ ರೋಗಿಗಳಿಗೆ ತೊಂದರೆ ಉಂಟು ಮಾಡುತ್ತವೆ ಎಂದು ವಿವರಿಸಿದರು.

ಕಾರ್ಯಕ್ರಮದಲ್ಲಿ ಮುನ್ನೂರುಕಾಪು ಶಿಕ್ಷಣ ಸಂಸ್ಥೆಯ ಮುಖ್ಯ ಶಿಕ್ಷಕರಾದ ಉಮಾದೇವಿ, ದೈಹಿಕ ಶಿಕ್ಷಕರಾದ ರವಿ ಕುಮಾರ್ ಹಾಗೂ ಗಂಗಾಧರ, ಮಾಲಿನ್ಯ ನಿಯಂತ್ರಣ ಮಂಡಳಿಯ ವೈಜ್ಞಾನಿಕ ಸಹಾಯಕ ಪ್ರವೀಣ್ ಕುಮಾರ್, ಕ್ಷೇತ್ರ ಸಹಾಯಕ ಮಲ್ಲಿಕಾರ್ಜುನ ಸೇರಿದಂತೆ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.

ಕಬಡ್ಡಿಯಿಂದ ದೈಹಿಕ, ಮಾನಸಿಕ ಆರೋಗ್ಯ ವರ್ಧನೆ: ಶಾಸಕ ಕಿರಣ್ ಕುಮಾರ್ ಕೊಡ್ಗಿ



ಕುಂದಾಪುರ,

ಕಬಡ್ಡಿಗೆ ಭಾರತದಲ್ಲಿ ವಿಫುಲ ಅವಕಾಶವಿದೆ. ದೈಹಿಕ, ಮಾನಸಿಕ ಆರೋಗ್ಯ ವರ್ಧನೆ ಜತೆಗೆ, ಸಾಮಾಜಿಕ ಒಗ್ಗೂಡುವಿಕೆಗೆ ಕಬಡ್ಡಿ ಸಹಕಾರಿ. ಇಂದಿನ ಯುವಕರಲ್ಲಿ ಕ್ರೀಡಾ ಪರಂಪರೆ, ಶಕ್ತಿ ಕಡಿಮೆಯಾಗುತ್ತಿದೆ. ಸರಕಾರ, ಸಮಾಜದ ಹಿರಿಯರು ನಮ್ಮ ಪರಂಪರೆ ಉಳಿಸುವ ಕೆಲಸ ಮಾಡಬೇಕು. ಕುಂದಾಪುರದ ಗಾಂಧಿ ಮೈದಾನದಲ್ಲಿ ಸುಸಜ್ಜಿತ ಕಬಡ್ಡಿ ಒಳಾಂಗಣ ಆಗುತ್ತಿದ್ದು, ಶೀಘ್ರದಲ್ಲಿ ಪೂರ್ಣಗೊಳ್ಳಲಿದೆ ಎಂದು ಕುಂದಾಪುರ ಶಾಸಕ ಎ. ಕಿರಣ್ ಕುಮಾರ್ ಕೊಡ್ಗಿ ಹೇಳಿದ್ದಾರೆ.


ಖಾರ್ವಿಕೇರಿಯ ಫ್ರೆಂಡ್ಸ್ ಮಧ್ಯಕೇರಿ ಆಶ್ರಯದಲ್ಲಿ ದೀಪಾವಳಿ ಪ್ರಯುಕ್ತ ಖಾರ್ವಿಕೇರಿಯಲ್ಲಿ ಅಖಿಲ ಕರ್ನಾಟಕ ಕೊಂಕಣ ಖಾರ್ವಿ ಸಮಾಜ ಬಾಂಧವರ ರಾಜ್ಯ ಮಟ್ಟದ ಹಾಗೂ ಮಂಗಳೂರು ವಿವಿ ಮಟ್ಟದ ಆಹ್ವಾನಿತ ತಂಡಗಳ ನಡುವೆ ಶುಕ್ರವಾರ ರಾತ್ರಿ ಆಯೋಜಿಸಲಾದ ಹೊನಲು ಬೆಳಕಿನ 50 ನೇ ವರ್ಷದ ಕಬಡ್ಡಿ ಪಂದ್ಯಾಟದಲ್ಲಿ ಅವರು ಮಾತನಾಡುತಿದ್ದರು.ಪಂದ್ಯಾಟವನ್ನು ಉಡುಪಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹರಿರಾಂ ಶಂಕರ್ ಉದ್ಘಾಟಿಸಿದರು.


ಕ್ರೀಡಾಂಗಣ ಉದ್ಘಾಟಿಸಿ ಮೊಳಹಳ್ಳಿಯ ಜಯರತ್ನ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ದಿನೇಶ್ ಹೆಗ್ಡೆ ಮೊಳಹಳ್ಳಿ ಮಾತನಾಡಿದರು. ಉದ್ಯಮಿ ರಾಘವೇಂದ್ರ ಖಾರ್ವಿ ಮಂಗಳೂರು ಬೆಳಕಿನ ವ್ಯವಸ್ಥೆಗೆ ಚಾಲನೆ ನೀಡಿದರು. ಖಾರ್ವಿಕೇರಿಯ ಶ್ರೀಮಹಾಕಾಳಿ ದೇವಸ್ಥಾನದ ಅಧ್ಯಕ್ಷ ಪ್ರಕಾಶ್ ಆರ್. ಖಾರ್ವಿ ಅಧ್ಯಕ್ಷತೆ ವಹಿಸಿದ್ದರು.

ವಿವಿಧ ರಂಗದ ಸಾಧಕರಾದ ಸಮಾಜ ಸೇವೆಯಲ್ಲಿ ರವಿ ಕಟಪಾಡಿ, ಸುಜನ್ ಶೆಟ್ಟಿ, ಶಿಲ್ಪಾ ಹಾಗೂ ಶಿಕ್ಷಣ ಸೇವೆಯಲ್ಲಿ ಆನಂದ ಪೂಜಾರಿ ಇರ್ವತ್ತೂರು ಅವರನ್ನು ಸಮ್ಮಾನಿಸಲಾಯಿತು. ಸ್ವರ್ಣ ಜುವೆಲ್ಲರ್ಸ್‌ನ ಗುಜ್ಜಾಡಿ ದೀಪಕ್ ನಾಯಕ್, ನ್ಯೂ ಮೆಡಿಕಲ್ ಆಸ್ಪತ್ರೆ ಮುಖ್ಯಸ್ಥ ಡಾ.ರಂಜನ್ ಆರ್.ಶೆಟ್ಟಿ, ಉದ್ಯಮಿಗಳಾದ ಸಹನಾ ಗ್ರೂಪ್ಸ್ ನ ಸುರೇಂದ್ರ ಶೆಟ್ಟಿ, ಎಂ.ಬಾಲಾಜಿ, ಗಣೇಶ್ ರಾವ್, ಆನಂದ್ ಎಲ್.ಖಾರ್ವಿ, ಮುಕ್ತಾರ್ ಶಫಿ ತಮಿಳುನಾಡು, ತಿಮ್ಮಪ್ಪ ಖಾರ್ವಿ, ಮಂಜುನಾಥ ಆಸ್ಪತ್ರೆಯ ಆಡಳಿತ ಸದಸ್ಯೆ ಪ್ರತಿಮಾ ಕುಲಾಲ್, ಓಕ್ ವುಡ್ ಇಂಡಿಯನ್ ಸ್ಕೂಲ್‌ನ ಆಡಳಿತ ನಿರ್ದೇಶಕಿ ನೀತಾ ಅಭಿನಂದನ್ ಶೆಟ್ಟಿ, ಮತ್ತಿತರರು ಉಪಸ್ಥಿತರಿದ್ದರು. ಫ್ರೆಂಡ್ಸ್ ಮಧ್ಯಕೇರಿ ಅಧ್ಯಕ್ಷ ಗುರುಪ್ರಸಾದ್ ಖಾರ್ವಿ ಪ್ರಸ್ತಾವಿಸಿ, ಸ್ವಾಗತಿಸಿದರು. ಸುಧೀರ್ ಖಾರ್ವಿ ಪರಿಚಯಿಸಿ, ರೀತು ಖಾರ್ವಿ ಅಭಿನಂದನಾ ಪತ್ರ ವಾಚಿಸಿದರು. ಪತ್ರಕರ್ತ ರಾಜೇಶ್ ಕೆ.ಸಿ. ಕಾರ್ಯಕ್ರಮ ನಿರೂಪಿಸಿದರು. ಆಕಾಶ್ ಖಾರ್ವಿ ವಂದಿಸಿದರು.

ಅರಕೇರಾದಲ್ಲಿ ಪ್ರಜಾಸೇವಾ ಆಂದೋಲನ ಕಾರ್ಯಕ್ರಮ

ಸರಕಾರಿ ಸೌಲಭ್ಯಗಳ ಸದ್ಬಳಕೆಗೆ ಜಿಲ್ಲಾಧಿಕಾರಿ ಪೂವಿತಾ ಎಸ್. ಸಾರ್ವಜನಿಕರಲ್ಲಿ ಮನವಿ





ರಾಯಚೂರು

ಸರ್ಕಾರವೇ ಜನರ ಮನೆ ಬಾಗಿಲಿಗೆ ತೆರಳಿ ಅವರ ಸಮಸ್ಯೆಗಳನ್ನು ಆಲಿಸುವ ವ್ಯವಸ್ಥೆಯನ್ನು ರೂಪಿಸಲಾಗಿದ್ದು, ಸಾರ್ವಜನಿಕರು ಈ ಸೌಲಭ್ಯವನ್ನು ಹೆಚ್ಚಿನ ಸಂಖ್ಯೆಯಲ್ಲಿ ಸದ್ಬಳಕೆ ಮಾಡಿಕೊಳ್ಳಬೇಕೆಂದು ಜಿಲ್ಲಾಧಿಕಾರಿಗಳಾದ ಪೂವಿತಾ ಎಸ್. ಅವರು ಹೇಳಿದರು.

ನವೆಂಬರ್ 07ರ ಶನಿವಾರ ದಂದು ಜಿಲ್ಲೆಯ ಅರಕೇರಾ ಪಟ್ಟಣದ ಮಹಾತ್ಮ ಗಾಂಧಿ ಕ್ರೀಡಾಂಗಣದಲ್ಲಿ ತಾಲೂಕು ಆಡಳಿತ, ತಾಲೂಕು ಪಂಚಾಯತ್ ಅರಕೇರಾ ಹಾಗೂ ವಿವಿಧ ಇಲಾಖೆಯಗಳ ಸಹಯೋಗದೊಂದಿಗೆ ಹಮ್ಮಿಕೊಂಡಿದ್ದ ಪ್ರಜಾಸೇವಾ ಆಂದೋಲನ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಅವರು ಮಾತನಾಡಿದರು.

ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸಿ, ಅವುಗಳನ್ನು ಪರಿಹರಿಸುವ ಉದ್ದೇಶದಿಂದ ಹಮ್ಮಿಕೊಳ್ಳಲಾಗಿರುವ ಪ್ರಜಾ ಸೇವೆ ಆಂದೋಲನ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಗಿದೆ. ಸಾರ್ವಜನಿಕರು ಜಿಲ್ಲಾ ಮಟ್ಟದ ಕಚೇರಿಗಳಿಗೆ ಅಲೆಯುವುದನ್ನು ತಪ್ಪಿಸಲು, ಅಧಿಕಾರಿಗಳೇ ನೇರವಾಗಿ ಜನರ ಬಳಿಗೆ ತೆರಳಿ ಅವರ ಕುಂದುಕೊರತೆಗಳನ್ನು ಆಲಿಸಿ ಸ್ಥಳದಲ್ಲೇ ಹಾಗೂ ಸಕಾಲದಲ್ಲಿ ಸಮಸ್ಯೆಗಳನ್ನು ಬಗೆಹರಿಸಲು ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಹೆಚ್ಚಿನ ಸಂಖ್ಯೆಯಲ್ಲಿ ರೆವೆನ್ಯೂ ದಾಖಲೆಗಳಿಗೆ ಸಂಬಧಿಸಿದತೆ ದೇವದುರ್ಗ ಮತ್ತು ಅರಕೆರೆ ತಾಲೂಕಿಗೆ ಸಾರ್ವಜನಿಕರು ಅಲೆಯುತ್ತಿರುವ ಪರಿಸ್ಥಿತಿ ಹಾಗೂ ಈ ವರ್ಷ ತೀವ್ರ ಬರಗಾಲದ ಸಮಸ್ಯೆ ಇರುವುದರಿಂದ, ರೈತರು ಬಿತ್ತನೆ ಮಾಡಿರುವ ಬೆಳೆಗಳನ್ನು ಕಾಪಾಡಲು ಮತ್ತು ಎನ್‌ಆರ್‌ಬಿಸಿ ಮೂಲಕ ನೀರು ಹರಿಸಲು ಹಲವು ಬಾರಿ ಮನವಿ ಮಾಡಲಾಗಿದ್ದು, ರೈತರ ಸಂಕಷ್ಟಗಳಿಗೆ ಸ್ಪಂದಿಸುವ ನಿಟ್ಟನಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು. ದೇವದುರ್ಗ ಮತ್ತು ಅರಕೇರಾ ತಾಲೂಕುಗಳಲ್ಲಿ ಬಾಲ್ಯವಿವಾಹ ಪ್ರಕರಣಗಳು ಹಾಗೂ ಚಿಕ್ಕ ವಯಸ್ಸಿನಲ್ಲಿ ಗರ್ಭಿಣಿಯರಾಗುವ ಘಟನೆಗಳು ಮತ್ತು ಪೋಕ್ಸೋ ಪ್ರಕರಣಗಳು ಹೆಚ್ಚಾಗಿರುವುದು ಗಮನಕ್ಕೆ ಬಂದಿದ್ದು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವತಿಯಿಂದ ಗರ್ಭಿಣಿಯರು, ಬಾಣಂತಿಯರು ಹಾಗೂ ಹೆಣ್ಣು ಮಕ್ಕಳಿಗಾಗಿ ಇರುವ ವಿವಿಧ ಸರ್ಕಾರಿ ಯೋಜನೆಗಳ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಪ್ರಜಾಸೇವಾ ಕಾರ್ಯಕ್ರಮದಲ್ಲಿ ವಿವಿಧ ಸ್ಟಾಲ್‌ಗಳನ್ನು ತೆರೆಯಲಾಗಿದೆ ಎಂದರು.

ಸಮಾಜ ಕಲ್ಯಾಣ ಇಲಾಖೆಯಿಂದ ಹಾಸ್ಟೆಲ್ ಪ್ರವೇಶ ಹಾಗೂ ಇತರೆ ಸೌಲಭ್ಯಗಳು, ಆಹಾರ ಇಲಾಖೆಯಿಂದ ಪಡಿತರ ಚೀಟಿ ವಿತರಣೆ ಮತ್ತು ಅದನ್ನು ನಿರಂತರಗೊಳಿಸುವ ಕುರಿತು ಕ್ರಮ ವಹಿಸಲಾಗುತ್ತಿದೆ.

ಒಂದನೇಯ ಪುಟದಿಂದ

ರಾಯಚೂರಿನಲ್ಲಿ ಟಿಪ್ಪು ಸುಲ್ತಾನ್ ಜಯಂತಿ ಆಚರಣೆ

ಅವರು ಕೇವಲ ಮೈಸೂರಿನ ಹುಲಿಯಲ್ಲ, ನಾಡಿನ ಹುಲಿ. ಟಿಪ್ಪು ಸುಲ್ತಾನ್ ಅವರನ್ನು ಒಂದು ಸಮುದಾಯಕ್ಕೆ ಮಾತ್ರ ಸೀಮಿತಗೊಳಿಸಲು ಸಾಧ್ಯವಿಲ್ಲ ಎಂದು ಹೇಳಿದರು.

ಈ ಸಂದರ್ಭದಲ್ಲಿ ವಿವಿಧ ಸಂಘ-ಸಂಸ್ಥೆಗಳ ಮುಖಂಡರು ಟಿಪ್ಪು ಸುಲ್ತಾನ್ ಅವರ ನಾಮಫಲಕಕ್ಕೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು.

ಓಬವ್ವ ನಮ್ಮೆಲ್ಲರಿಗೂ ಸದಾ ಸ್ಫೂರ್ತಿದಾಯಕ-ಅಪರ ಜಿಲ್ಲಾಧಿಕಾರಿ ಸೋಮಲಿಂಗ

ಶಸ್ತ್ರವನ್ನಾಗಿಸಿದ ಧೀರ ಮಾತೆ. ವಂಶ ಪರಂಪರೆ ರಾಜಕೀಯದಲ್ಲಿ ರಾಣಿ ಅರ್ಹತೆಯಿಂದ ತರಬೇತಿಯನ್ನು ಪಡೆದು, ವೀರಸೇನೆ ಹಾಗೂ ಎದುರಾಳಿಯ ಸೈನ್ಯವನ್ನು ಮೆಟ್ಟಿಸುವ ಇತಿಹಾಸವನ್ನು ನಾವು ಕಾಣುತ್ತೇವೆ. ಆದರೆ, ಒನಕೆ ಒಬವ್ವ ಯಾವುದೇ ರಾಜಕೀಯದಲ್ಲಿ ಹುಟ್ಟಿಲ್ಲ, ಸೈನ್ಯದ ತರಬೇತಿಯೂ ಇಲ್ಲ, ಶಸ್ತ್ರಾಸ್ತ್ರ ಹಿಡಿಯುವ ಅಭ್ಯಾಸವೂ ಇಲ್ಲ, ಹಂತಹ ಸಾಮಾನ್ಯ ಕುಟುಂಬದಲ್ಲಿ ಬಡತನದಲ್ಲಿರುವ ಮಾತೆ, ದೇಶಕ್ಕೆ ಅವಶ್ಯಕತೆ ಇದ್ದಾಗ ದೇಶದ ರಕ್ಷಣೆ ಮಾಡುತ್ತಾಳೆ ಅನ್ನುವ ಸಂದೇಶವನ್ನು ಜಗತ್ತಿಗೆ ಸಾರಿದವರು ಒನಕೆ ಒಬವ್ವ. ಹಿಂದಿನ ಇತಿಹಾಸ ಕಾಲದಲ್ಲಿ ಒಬ್ಬ ಸ್ತ್ರೀ ತನ್ನ ಗಂಡ ಊಟ ಮಾಡುವ ಸಂದರ್ಭದಲ್ಲಿ, ನಿದ್ರೆ ಮಾಡುವ ಸಂದರ್ಭದಲ್ಲಿ ಯಾವುದೇ ಕೆಟ್ಟ ವಿಷಯಗಳನ್ನು ಹೇಳುವುದಿಲ್ಲ. ಆದರೆ, ಒನಕೆ ಒಬವ್ವ ಅವರು ಅನಿರೀಕ್ಷಿತವಾಗಿ ಒನಕೆಯನ್ನು ಶಸ್ತ್ರವನ್ನಾಗಿ ಬಳಸಿ ಹೈದರಾಲಿ ಸೈನ್ಯವನ್ನು ಎದುರಿಸಿದ ಸಾಹಸ ಅನನ್ಯವಾದುದು. ಮದಕಾರಿ ನಾಯಕನ ಕೋಟೆಯು ಹಲವಾರು ವರ್ಷಗಳಿಂದ ಶ್ರೇಷ್ಠತೆಯಿಂದ ಕೂಡಿತ್ತು. ಅಂತಹ ಕೋಟೆಯನ್ನು ಧ್ವಂಸ ಮಾಡಲು ಹೈದರಾಲಿ ಸೈನ್ಯ ನುಗ್ಗಿ ಕೋಟೆಯನ್ನು ಧ್ವಂಸಗೊಳಿಸಲು ಪ್ರಯತ್ನಿಸಿದ ಸಂದರ್ಭದಲ್ಲಿ, ಒನಕೆ ಒಬವ್ವ ತನ್ನ ಪ್ರಾಣವನ್ನು ಲೆಕ್ಕಿಸದೆ ಒಬ್ಬೊಬ್ಬರನ್ನೇ ಒನಕೆಯಿಂದ ಹೊಡೆದುರುಳಿಸಿ ನಾಡನ್ನು ರಕ್ಷಿಸಿದರು.ಇಂತಹ ವೀರ ವನತೆಯ ಆದರ್ಶವನ್ನು ನಾವೆಲ್ಲರೂ ಮೈಗೂಡಿಸಿಕೊಂಡು, ದೇಶಾಭಿಮಾನವನ್ನು ಬೆಳೆಸಿಕೊಳ್ಳಬೇಕಿದೆ ಎಂದರು.

ಉಪನ್ಯಾಪಕರಾಗಿ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ವಿಭಾಗದ ಸಂಯೋಜಕರಾದ ಡಾ.ಶರಣಪ್ಪ ಚಲವಾದಿ ಅವರು ಮಾತನಾಡಿ, ಇಂದಿನ ಆಧುನಿಕ ಯುಗದಲ್ಲಿಯೂ ಮಹಿಳೆಯರು ತಮ್ಮ ಆತ್ಮಬಿಂಬ, ರಕ್ಷಣೆ ಹಾಗೂ ಧೈರ್ಯಕ್ಕಾಗಿ ಹೋರಾಡಬೇಕಾದ ಅನಿವಾರ್ಯತೆ ಇದೆ. ಕಷ್ಟದ ಸಂದರ್ಭಗಳಲ್ಲಿ ಎದೆಗುಂದದೆ, ಒನಕೆ ಓಬವ್ವಳಂತಹ ವೀರ ನಾರಿಯರ ಧೈರ್ಯ, ಸಾಹಸ ಹಾಗೂ ಸಮಯ ಪ್ರಜ್ಞೆಯನ್ನು ಇಂದಿನ ಪ್ರತಿಯೊಬ್ಬ ಮಹಿಳೆಯೂ ಮೈಗೂಡಿಸಿಕೊಳ್ಳಬೇಕಿದೆ. ದೇಶ ಮತ್ತು ಸಮಾಜದ ರಕ್ಷಣೆಗಾಗಿ ಧೈರ್ಯದಿಂದ ನಿಲ್ಲುವ ಗುಣವೇ ನಿಜವಾದ ಸ್ತ್ರೀ ಶಕ್ತಿಯ ಪ್ರತೀಕವಾಗಿದೆ ಎಂದರು.

ವಿವಿಧ ಗಣ್ಯರಿಂದ ಮೆರವಣಿಗೆಗೆ ಚಾಲನೆ: ವೀರರಾಣಿ ಒನಕೆ ಓಬವ್ವ ಜಯಂತಿ ಅಂಗವಾಗಿ ರಾಯಚೂರು ನಗರದ ಡಾ.ಬಿ.ಆರ್.ಅಂಬೇಡ್ಕರ್ ಅವರ ವೃತ್ತದಲ್ಲಿ ವೀರರಾಣಿ ಒನಕೆ ಓಬವ್ವ ಅವರ ಭಾವಚಿತ್ರಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಅರುಣಾಂಗ್ಷು ಗಿರಿ., ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ, ಅಪರ ಜಿಲ್ಲಾಧಿಕಾರಿ ಸೋಮಲಿಂಗ ಗೋಪಾಲ ಗೆಣ್ಣೂರು ಸೇರಿದಂತೆ ವಿವಿಧ ಗಣ್ಯರು, ಸಮಾಜದ ಮುಖಂಡರು ಮಾಲಾರ್ಪಣೆ ಮಾಡುವ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು.

ಮೆರವಣಿಗೆಯು ಡಾ.ಬಿ.ಆರ್.ಅಂಬೇಡ್ಕರ್ ಮಾರ್ಗವಾಗಿ ನಗರದ ಪಂಡಿತ ಸಿದ್ಧರಾಮು ಜಂಬಲದಿನ್ನಿ ರಂಗಮದಿರಕ್ಕೆ ಬಂದು ತಲುಪಿತು.

ಮೆರವಣಿಗೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ವಿವಿಧ ಕಲಾ ತಂಡಗಳನ್ನು ಆಯೋಜನೆ ಮಾಡಲಾಗಿತ್ತು.

ಇದೇ ಸಂದರ್ಭದಲ್ಲಿ ರಾಯಚೂರು ಮಹಾನಗರ ಪಾಲಿಕೆಯ ಪರಿಸರ ವಿಭಾಗದ ಸಹಾಯಕ ಅಂಭಿಯತರರಾದ ಜೈಪಾಲ್ ರೆಡ್ಡಿ, ಸಮಾಜದ ಮುಖಂಡರಾದ ಮಲ್ಲೇಶ ಕೋಮಿನಿ, ಲಲಿತಾ ಅಂಜಿನೇಯ, ಜಗನ್ನಾಥ ಸುಂಕರಿ, ಅರ್ಚನಾ ಸುಂಕರಿ, ಸಂತೋಷ ನಂದಿ, ಮಾರೆಪ್ಪ, ಎಂ.ವಸತ, ದಯಾನಂದ, ಶಿವರಾಜ್, ವಿಶ್ವನಾಥ, ದೇವಿಂದ್ರ, ರಾಘವೇಂದ್ರ, ಭೀಮಣ್ಣ ಸೇರಿದಂತೆ ಇತರರು ಇದ್ದರು.

ಐಡಿಎಸ್ ಎಮ್ ಟಿ ಬಡಾವಣೆಯಲ್ಲಿ ಅನಾಥವಾದ ದೇವರಾಜ ಅರಸು ಮೂರ್ತಿ : ಶೀಘ್ರ ಅನಾವರಣಕ್ಕೆ ಡಾ. ಬಾಬುರಾವ್ ಆಗ್ರಹ

ಅಗೌರವವಾಗಿದೆ. ಈ ಕುರಿತು ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲಾಧಿಕಾರಿಗಳು ಮತ್ತು ಮಹಾನಗರ ಪಾಲಿಕೆ ಆಯುಕ್ತರು ಗಮನ ಹರಿಸದಿರುವುದು ಅವಮಾನಕರ ಸಂಗತಿಯಾಗಿದೆ.

ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕ್ರಮ ಕೈಗೊಂಡು ಮೂರ್ತಿಯನ್ನು ಉದ್ಘಾಟನೆಗೊಳಿಸಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ತೀವ್ರ ಹೋರಾಟ ನಡೆಸಲಾಗುವುದು ಎಂದು ಅವರು ಎಚ್ಚರಿಕೆ ನೀಡಿದ್ದಾರೆ.

ಉಡಮಗಲ್ ಖಾನಾಪುರ್ ಪ್ರೌಢಶಾಲೆಯಲ್ಲಿ ಒನಕೆ ಓಬವ್ವ ಮತ್ತು ಮೌಲಾನ ಅಬುಲ್ ಕಲಾಂ ಆಜಾದ್ ಜಯಂತಿಯ



ರಾಯಚೂರು ತಾಲೂಕಿನ ಉಡಮಗಲ್ ಖಾನಾಪುರದ ಸರ್ಕಾರಿ ಪ್ರೌಢಶಾಲೆಯಲ್ಲಿ ದಿನಾಂಕ 11/11 /2026 ರಂದು ವೀರ ವನಿತೆ ಒನಕೆ ಓಬವ್ವ ಹಾಗೂ ಭಾರತದ ಸ್ವಾತಂತ್ರ್ಯ ದೇಶದ ಪ್ರಥಮ ಶಿಕ್ಷಣ ಮಂತ್ರಿ ಮೌಲಾನ ಅಬ್ದುಲ್ ಕಲಾಂ ಆಜಾದ್ ಅವರ ಜಯಂತಿ ಕಾರ್ಯಕ್ರಮವು ಜರುಗಿತು . ಈ ಕಾರ್ಯಕ್ರಮವನ್ನು ಸಸಿಗೆ ನೀರು ಹಾಕುವುದರ ಮೂಲಕ ಶಾಲೆಯ ಕನ್ನಡ ಕಲಾ ಶಿಕ್ಷಕರು ಹಾಗೂ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಶಿಕ್ಷಣ ವಿಭಾಗದ ಜಿಲ್ಲಾ ಸಂಚಾಲಕರಾದ ಡಾ. ದಂಡಪ್ಪ ಬಿರಾದಾರ್ ಉದ್ಘಾಟಿಸಿ ಮಾತನಾಡುತ್ತಾ.ಚಿತ್ರದುರ್ಗ ಕೋಟೆಯ ಸಂರಕ್ಷಣೆ ಮಾಡುವಲ್ಲಿ ಹೈದರಾಲಿಯ ಸೈನ್ಯವನ್ನು ಸೆದೆ ಬಡೆವಲ್ಲಿ ಒನಕೆ ಓಬವ್ವನ ಪಾತ್ರ ಅತ್ಯಮೂಲ್ಯವಾದದ್ದು. ಗಂಡನು ಊಟಕ್ಕೆ ಮನೆಗೆ ಬಂದಾಗ ಗಂಡನೆ ಊಟ ಕೊಟ್ಟು ನೀರು ಕೊಡಲು ಹೋದಾಗ ಮನೆಯಲ್ಲಿ ನೀರು ಇಲ್ಲದೆ ಹೋದನ್ನು ಗಮನಿಸಿ. ತಕ್ಷಣವೇ ನೀರು ತರಲು ಹೋದಂತ ಸಂದರ್ಭದಲ್ಲಿ ಹೆದರಲ್ಲಿಯ ಸೈನ್ಯ ಕೋಟೆಯ ಕಿಂಡಿಯ ಮೂಲಕ ನುಸುಳುವುದನ್ನು ಕಂಡು. ತಕ್ಷಣವೇ ಮನೆಗೆ ಬಂದು ಮನೆಯಲ್ಲಿ ಇದ್ದಂತ ಒನಕೆಯನ್ನ ತೆಗೆದುಕೊಂಡು ಹೋಗಿ ಕೋಟೆಯ ರಂಧ್ರದ ಮೂಲಕ ಬರುತ್ತಿದ್ದ ಸೈನ್ಯವನ್ನು ಎಳೆದು ತನ್ನ ಧೈರ್ಯ ಮತ್ತು ಸಾಹಸದಿಂದ ಅವರನ್ನ ಕೊಂದಳು ನಂತರ ಅವರೊಡನೆ ಹೋರಾಟ ಮಾಡಿ ವೀರ ಮರಣವನ್ನು ಅಪ್ಪಿದ ವೀರ ವನಿತೆ ಒನಕೆ ಓಬವ್ವ. ಅದರಂತೆ ಇಂದು ನಮ್ಮ ದೇಶದ ಪ್ರಪ್ರಥಮ ಶಿಕ್ಷಣ ಮಂತ್ರಿ ಆದ ಮೌಲಾನ ಅಬ್ದುಲ್ ಕಲಾಂ ಆಜಾದ್ ಅವರ ಜಯಂತಿ. ಇವರು ಮೆಕ್ಕಾದಲ್ಲಿ ಜನಿಸಿದ್ದು. ಭಾರತದ ಕೊಲ್ಕತ್ತದಲ್ಲಿ ಬಂದು ನೆಲೆಸಿದ್ದರು. ಗಾಂಧಿಜಿಯವರ ಸಂಗಡ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಗಳಾದರು ಇವರ ವ್ಯಕ್ತಿತ್ವ ಇವರ ಶಿಕ್ಷಣದ ಬಗ್ಗೆ ಹೊಂದಿರುವ ಕಾಳಜಿ ಹಿನ್ನೆಲೆಯಲ್ಲಿ ದೇಶದ ಪ್ರಥಮ ಶಿಕ್ಷಣ ಮಂತ್ರಿಯಾಗಿ ಕಾರ್ಯನಿರ್ವಹಿಸಿದರು. ವಿಶೇಷವಾಗಿ ಉಚಿತ ಕಡ್ಡಾಯ ಶಿಕ್ಷಣದ ಪರಿಕಲ್ಪನೆಗೆ ನಾಂದಿ ಹಾಡಿದವರು.ಇವರು ಮಾಡಿದ ಶೈಕ್ಷಣಿಕ ಕ್ರಾಂತಿಗಳು ಇಂದಿಗೂ ಮಾದರಿಯಾಗಿವೆ. ಇವರ ಹುಟ್ಟುಹಬ್ಬವನ್ನು ರಾಷ್ಟ್ರೀಯ ಶಿಕ್ಷಣ ದಿನಾಚರಣೆ ಎಂದು ಆಚೇನೆ ಮಾಡಲಾಗುತ್ತದೆ. ಆದ್ದರಿಂದ ಸಮಾಜದಲ್ಲಿಯೇ ಪ್ರತಿಯೊಬ್ಬರು ಶಿಕ್ಷಣವನ್ನ ಪಡೆಯುವುದರ ಮೂಲಕ ಭಾರತ ಸಮಾಜವನ್ನು ಶೈಕ್ಷಣಿಕ ಸಮಾಜವನ್ನು ನಿರ್ಮಾಣ ಮಾಡಬೇಕೆಂದು ಡಾ. ಬಿರಾದಾರ ಕರೆ ನೀಡಿದರು.ಈ ಕಾರ್ಯಕ್ರಮದಲ್ಲಿ ಶಾಲೆಯ ಶಿಕ್ಷಕಿಯರಾದ ನಫೀಸ್ ಅಂಜು ವು ವೀಣಾ ಕುಲಕರ್ಣಿ.ಪದ್ಮಕೆ ಅನಿತ ಎನ್. ಉಪಸ್ಥಿತರಿದ್ದರು ನಾಂದಿ ಫೌಂಡೇಶನ್ ಕೌಶಲ್ಯ ವಿಭಾಗದ ಮುಖ್ಯಸ್ಥರಾದ ಜ್ಯೋತಿ ಭಂಡಾರಿ ಸಕಲರನ್ನು ಸ್ವಾಗತಿಸಿ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರ್ವಹಣೆ ಮಾಡಿದರು.ನೀಲಕಂಠ ಸಿಬ್ಬಂದಿ ಕಾರ್ಯಕ್ರಮ ಆಯೋಜನೆ ಮಾಡುವಲ್ಲಿ ಕಾರ್ಯನಿರ್ವಹಣೆ ಮಾಡಿದನು.ಕುಮಾರಿ ಮೇಘ ನಾ ವಂದನಾರ್ಪಣೆ ಮಾಡಿದಳು.ನಾಗ ರಾವು ಚಲನಚಿತ್ರದ ಒನಕೆ ಓಬವ್ವ ಜೀವನ ಚರಿತ್ರೆಯ ಹಾಡನ್ನು ಪ್ರಾರ್ಥನೆ ರೂಪದಲ್ಲಿ ಮಕ್ಕಳಿಗೆ ಕೇಳಿ ಸಲಾಯಿತು.ಈ ಕಾರ್ಯಕ್ರಮದಲ್ಲಿ ಶಾಲಾ ವಿದ್ಯಾರ್ಥಿಗಳು ಸಿಬ್ಬಂದಿಯವರು ಉಪಸ್ಥಿತರಿದ್ದರು.

ಎಚ್ ಡಿ ಎಫ್ ಸಿ ಜೀವ ವಿಮೆ ಕೊಪ್ಪಳ ಉಪ ಶಾಖೆ ಕಚೇರಿಯಲ್ಲಿ ಲಕ್ಷ್ಮಿ ಪೂಜಾ

ಕೊಪ್ಪಳ/ ದಸರಾ ಮತ್ತು ದೀಪಾವಳಿ ಹಬ್ಬದ ಪ್ರಯುಕ್ತ ಎಚ್ ಡಿ ಎಫ್ ಸಿ, ಜೀವ ವಿಮೆ ಕೊಪ್ಪಳ ಉಪ ಶಾಖೆ ಕಚೇರಿಯಲ್ಲಿ ವಿಶೇಷ ಲಕ್ಷ್ಮಿ ಪೂಜಾ ಕಾರ್ಯಕ್ರಮ ಸಡಗರ ಸಂಭ್ರಮದಿಂದ ಮತ್ತು ಭಕ್ತಿ ಭಾವದಿಂದ ಆಚರಿಸಲಾಯಿತು,

ಎಚ್ ಡಿ ಎಫ್ ಸಿ, ಜೀವ ವಿಮೆ ಪಾಲಸಿ ಶಾಖೆ ಕಚೇರಿ ಗದುಗಿನ ವ್ಯವಸ್ಥಾಪಕರಾದ ಶಿವಲಿಂಗೇಶ್ ಹಿರೇಮಠ ರವರ ಸೂಚನೆ ಮತ್ತು ಅವರ ಮಾರ್ಗದರ್ಶನದಲ್ಲಿ ಬುಧವಾರದಂದು ಲಕ್ಷ್ಮೀದೇವಿ ಭಾವಚಿತ್ರಕ್ಕೆ ವಿಶೇಷ ಪೂಜೆ ಸಲ್ಲಿಸುವುದರ ಮೂಲಕ ವಿಶೇಷ ಪ್ರಾರ್ಥನೆ ಸಲ್ಲಿಸಲಾಯಿತು,

ಈ ಸಂದರ್ಭದಲ್ಲಿ ಎಚ್ ಡಿ ಎಫ್ ಸಿ ಕೊಪ್ಪಳ ಉಪ ಶಾಖೆಯ ವ್ಯವಸ್ಥಾಪಕಿ ಪೀರಮಾ ನದಾಫ್, ಪಾಲುದಾರರಾದ ದೊಡ್ಡಯ್ಯ ಹಿರೇಮಠ, ಬಸವರಾಜ್ ಶೀಘನಳ್ಳಿ, ಶಾಂತಯ್ಯ ಗಡ್ಡಿಮಠ, ಕಾಮಣ್ಣ,ಗೀತಾ ಪಾಟೀಲ್, ಪ್ರತಿಮಾ ಪಟ್ಟಣಶೆಟ್ಟಿ, ಕವಿತಾ , ಪಿ, ಸಲಹೆಗಾರರಾದ ಗಂಗಾಧರಯ್ಯ ಹಿರೇಮಠ್, ಸೈಯದ್ ಸಾಧಿಕ್ ಹುಸೇನ್, ಗಾಯತ್ರಿ ಭೂತಾ, ನಾಗರತ್ನ ಬನ್ನಿ ಕೊಪ್ಪ, ದೀಪಾ ಸುನಿಲ್, ಭದರೇಶ್ ಕುಮಾರ್, ರಾಘವೇಂದ್ರ ಡಿ, ಬಿ,ಐಶ್ವರ್ಯ, ಸಾಧಿಕ ಅಲಿ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು, ವಿಶೇಷ ಪೂಜಾ ಕಾರ್ಯಕ್ರಮದ ನಂತರ ಏರ್ಪಡಿಸಿದ ಸರಳ ಸಾಂಕೇತಿಕ ಸಮಾರಂಭದಲ್ಲಿ ಬಹುತೇಕ ಎಲ್ಲರೂ ಮಾತನಾಡಿ ಸಂಸ್ಥೆಯ ಅಭಿವೃದ್ಧಿ ಹಾಗೂ ವಿಮೆ ಮಾಡುವ ಗ್ರಾಹಕ ಸಾರ್ವಜನಿಕರ ನೆಮ್ಮದಿಯ ಬದುಕಿಗೆ ಸಂಪೂರ್ಣ ಸಹಕಾರ ನೀಡುವುದರ ಜೊತೆಗೆ ಸಿಗಬಹುದಾದ ಸಹಾಯ ಸೌಕರ್ಯಗಳನ್ನು ಒದಗಿಸಿ ಕೊಡುವ ನಿಟ್ಟಿನಲ್ಲಿ ಮತ್ತು ಹೆಚ್ಚು ವಿಮೆ ಮಾಡುವುದರ ಜೊತೆಗೆ ಸಂಸ್ಥೆಯ ಅಭಿವೃದ್ಧಿಗೆ ಶ್ರಮಿಸೋಣ ಎಂದು ತಿಳಿಸಿದರು ಹಾಗೂ ಪರಸ್ಪರ ದೀಪಾವಳಿ ಹಬ್ಬದ ಶುಭಾಶಯ ಗಳನ್ನು ವಿನಿಮಯ ಮಾಡಿಕೊಂಡರು.

ನಶಾ ಮುಕ್ತ ರಾಯಚೂರು, ತಂಬಾಕು ಮುಕ್ತ ಯುವ ಅಭಿಯಾನ ಜಾಗೃತಿ ನಡಿಗೆ ಜೀವನ ಹಾಳು ಮಾಡುವ ಗಾಂಜಾ, ತಂಬಾಕುಗಳಿದ ದೂರವಿರಿ: ಆಯುಕ್ತ ಜುಬಿನ್

ರಾಯಚೂರು

ಗಾಂಜಾ ಮತ್ತು ತಂಬಾಕು ಪದಾರ್ಥಗಳ ಸೇವನೆಯಿಂದ ದೂರವಿರುವುದು ನಿಮ್ಮ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ರಕ್ಷಿಸಲು ಅತ್ಯಂತ ಮಹತ್ವದ ನಿರ್ಧಾರವಾಗಿದೆ. ಇವುಗಳ ಬಳಕೆಯು ಕೇವಲ ವೈಯಕ್ತಿಕ ಆರೋಗ್ಯವನ್ನಷ್ಟೇ ಅಲ್ಲದೆ, ಇಡೀ ಕುಟುಂಬದ ನೆಮ್ಮದಿಯನ್ನು ಹಾಳುಗೆಡವುತ್ತದೆ ಎಂದು ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹೊಪಾತ್ರ ಅವರು ಹೇಳಿದರು.

ಇತ್ತೀಚೆಗೆ ನಗರದ ನಗರದ ಶೆಟ್ಟಿ ಬಾವಿ ಚೌಕ್‌ದಿಂದ ಹರಿಜನವಾಡದ ನಾಗರಕಟ್ಟೆ ದೇವಸ್ಥಾನದವರೆಗೆ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ, ಪೊಲೀಸ್ ಇಲಾಖೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜಿಲ್ಲಾ ಮಾನಸಿಕ ಆರೋಗ್ಯ ವಿಭಾಗ ಹಾಗೂ ಜಿಲ್ಲಾ ತಂಬಾಕು ನಿಯಂತ್ರಣ ಕೋಶ ಹಾಗೂ ತಾಲೂಕಾ ಆರೋಗ್ಯಾಧಿಕಾರಿಗಳ ಕಾರ್ಯಾಲಯದ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ ನಶಾ ಮುಕ್ತ ರಾಯಚೂರು ಹಾಗೂ ತಂಬಾಕು ಮುಕ್ತ ಯುವ ಅಭಿಯಾನ 4.0ರ ಜಾಗೃತಿ ನಡಿಗೆ ಹಾಗೂ ಜಾಗೃತಿ ನಾಟಕಕ್ಕೆ ಚಾಲನೆ ನೀಡಿ, ಅವರು



ಮಾತನಾಡಿದರು. ದೇಹದ ಸದೃಡತೆ, ದೈಹಿಕ ಕ್ಷಮತೆಗೆ, ಬುದ್ದಿಮಟ್ಟದ ಬೆಳವಣಿಗೆ ಅಥವಾ ಕುಟುಂಬದ ಏಳ್ಗೆಗೆ ಏನನ್ನು ಸಹಾಯ ಮಾಡದ, ಮತ್ತು ಬರಿಸುವ, ಅಮಲು ತರಿಸುವ ವ್ಯಕ್ತಿತ್ವ, ಕುಟುಂಬವನ್ನೆ ನಾಶ ಮಾಡುವ ನಶಾ ಪದಾರ್ಥಗಳನ್ನು ನಾವೆಲ್ಲರೂ ಸೇರಿ ಸಮುದಾಯದಿಂದ ದೂರ ಮಾಡಬಾಕಿದೆ ಎಂದರು.

ಒಮ್ಮೆ ಹವ್ಯಾಸವಾಗಿ ಬಳಸಲು ಆರಂಭವಾದ ನಂತರ ಚಟವಾಗಿ ಬದಲಾಗುವ ನಶಾ ಪದಾರ್ಥಗಳಾದ, ಗಾಂಜಾ, ಅಫೀಮು, ಚರಸ್, ಹೆರಾಯೀನ್ ಹಾಗೂ ತಂಬಾಕು ಹಾಗೂ ಅದರ ಉತ್ಪನ್ನಗಳಾದ ಸಿಗರೇಟ್, ಬೀಡಿ, ಹುಕ್ಕಾ ಹಾಗೂ ಮದ್ಯಪಾನದಂತಹ ಅದರಲ್ಲೂ ಜಿಲ್ಲೆಯ ಕೆಲವು ಸ್ಥಳಗಲ್ಲಿ ಸಿಹೆಚಗ ಪೌಡರ್‌ನಿಂದ ತಯಾರಿಸಿದ ನಕಲಿ ಸೇಂಧಿಯತಹ ವಸ್ತುಗಳು ವ್ಯಕ್ತಿಯ ವ್ಯಕ್ತಿತ್ವವನ್ನು ನಾಶ ಮಾಡುವ ಜೊತೆಗೆ ಕುಟುಂಬದ ಗೌರವವನ್ನು ಸಹ ಕುಂದಿಸುತ್ತವೆ ಎಂದರು. ದೇಶಾದ್ಯತ 2020ರ ಆಗಷ್ಟ 15ರಂದು ಜಾಗೃತಿ ಅಭಿಯಾನವನ್ನು ಆರಂಭಿಸಿದ್ದು, ರಾಯಚೂರು ಜಿಲ್ಲೆಯ ಜನತೆಗೆ ನಶಾ ಪದಾರ್ಥಗಳ ಸೇವನೆಯಿಂದಾಗುವ ಹಾನಿ,

ದುಷ್ಪರಿಣಾಮಗಳ ಕುರಿತು ಜಿಲ್ಲಾಡಳಿತದ ಮಾರ್ಗ ದರ್ಶನದಲ್ಲಿ ನಗರ, ಗ್ರಾಮಗಳಲ್ಲಿ ಕಾಲೇಜು ವಿಧ್ಯಾರ್ಥಿಗಳಿಗೆ, ಸ್ಲಂ ಪ್ರದೇಶಗಳಲ್ಲಿ ಜಾಗೃತಿ ನೀಡಲಾಗುತ್ತಿದ್ದು, ನಶಾ ಪದಾರ್ಥಗಳ ಸೇವನೆ ಮಾಡಿದಾಗ ಹಲ್ಲೆ ಮಾಡುವ, ಮನೆಯ ಕೌಟುಂಬದ ಸದಸ್ಯರಿಂದ ನಿರ್ಲಕ್ಷ್ಯಕ್ಕೆ ಒಳಗಾಗುವ, ಆರ್ಥಿಕ ಸಂಕಷ್ಟದ ಸಮಸ್ಯೆಗಳಿಗೆ ಈಡಾಗುವುದನ್ನು ಮನವರಿಕೆ ಮಾಡಲು, ಅದರಲ್ಲೂ ಈ ಕುರಿತು ಯುವಕರಿಗೆ ಹೆಚ್ಚಿನ ಜಾಗೃತಿ ನೀಡೋಣವೆಂದರು.

ಈ ವೇಳೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ನಂದಿತಾ ಎಮ್.ಎನ್. ಅವರು ಮಾತನಾಡಿ, ನಶಾ ಪದಾರ್ಥಗಳನ್ನು ಸೇವಿಸುವ ವ್ಯಕ್ತಿಯು ಗಂಭೀರ ಆರೋಗ್ಯ ಸಮಸ್ಯೆಗಳಾದ ಕ್ಯಾನ್ಸರ್ (ವಿಶೇಷವಾಗಿ ಶ್ವಾಸಕೋಶ ಮತ್ತು ಬಾಯಿ ಕ್ಯಾನ್ಸರ್), ಲಿವರ್ ಸಿರೋಸಿಸ್, ಹೃದಯಾಘಾತ, ಪಾರ್ಶ್ವವಾಯು, ಮತ್ತು ಮಾನಸಿಕ ಆರೋಗ್ಯದ ಸಮಸ್ಯೆಗಳಾದ ಖಿನ್ನತೆ, ಮಾನಸಿಕ ಅಸ್ವಸ್ಥತೆ, ಆತ್ಮಹತ್ಯೆಯಂತ ಪ್ರಯತ್ನಗಳಿಗೆ ಒಳಗಾಗುವುದು ಕಾಣುತ್ತಿದ್ದೇವೆ. ಅಲ್ಲದೆ ತಂಬಾಕು ಮುಕ್ತ ಯುವ ಅಭಿಯಾನ 4.0ಅಡಿಯಲ್ಲಿ ಜಿಲ್ಲೆಯಾದ್ಯಂತ 2026ರ ಡಿಸೆಂಬರ್ ತಿಂಗಳವರೆಗೆ ತಂಬಾಕು ಸೇವೆಯಿಂದಾಗುವ ದುಷ್ಪರಿಣಾಮಗಳನ್ನು ತಡೆಯಲು ಕೋಟ್ಪಾ ಕಾಯ್ದೆ 2003ರ ಪರಿಣಾಮಕಾರಿ ಅನುಷ್ಠಾನದ ಜಾಗೃತಿ ಕಾರ್ಯ ನಡೆಯುವುದು ಎಂದರು. ಡಿ-ಅಡಿಕ್ಷನ್ ಕೇಂದ್ರ: ಈಗಾಗಲೇ ರಾಯಚೂರಿನಲ್ಲಿ ವ್ಯಸನದಿಂದ ಮುಕ್ತಿ ಪಡೆಯಲು ರಿವ್ಸ್ ಆಸ್ಪತ್ರೆಯ ಬಿ-ಬ್ಲಾಕ್ ರೂಮ್ ನಂಬರ್-27ರಲ್ಲಿ ಕೌನ್ಸಿಲಿಂಗ್ ಸಹಾಯ ಪಡೆಯುಲು ವ್ಯವಸ್ಥೆ ಮಾಡಲಾಗಿದೆ.

ಹಾಗೂ ಉಚಿತ ಮಾನಸಿಕ ಆರೋಗ್ಯ ಸಹಾಯವಾಣಿ 14416 ಸದುಪಯೋಗ ಪಡೆಯಬಹುದಾಗಿದೆ ಎಂದರು. ಜಾಗೃತಿ ನಾಟಕ: ನಶಾ ಪದಾರ್ಥಗಳ ಸೇವನೆಯಿಂದ ಆಗುವ ದುಷ್ಪರಿಣಾಮಗಳ ಕುರಿತು ಹರಿಜನವಾಡಾದಲ್ಲಿ ವೈದ್ಯಾಧಿಕಾರಿ, ಆರೋಗ್ಯ ಸಿಬ್ಬಂದಿ, ಆಶಾ ಕಾರ್ಯಕರ್ತೆಯರು ಜನತೆಗೆ ಮನ ಮುಟ್ಟುವಂತೆ ಕಿರು ನಾಟಕ ಪ್ರದರ್ಶಿಸಿ, ಸಾರ್ವಜನಿಕರಿಗೆ ಜಾಗೃತಿ ಮೂಡಿಸಲಾಯಿತು.

ಇದೇ ಆರೋಗ್ಯ ಕಾರ್ಯಕ್ರಮಗಳ ಜಿಲ್ಲಾ ಕಾರ್ಯಕ್ರಮ ಅನುಷ್ಠಾನ ಅಧಿಕಾರಿಗಳಾದ ಡಿಎಸ್‌ಓ ಡಾ. ಗಣೇಶ್ ಕೆ, ಆರ್‌ಸಿಹೆಚ್‌ಓ ಡಾ.ಶಾಕೀರ್ ಮೋಯಿನುದ್ದೀನ್, ಡಿಎಫ್‌ಡಬ್ಲ್ಯುಓ ಡಾ.ಶಿವಕುಮಾರ್ ನಾರಾ, ಡಿಟಿಓ ಡಾ.ಯಶೋಧಾ, ಡಿಎಲ್‌ಓ ಡಾ.ಅಮೃತ್ ಹುಕ್ಕೇರಿ, ತಾಲೂಕಾ ಆರೋಗ್ಯಾಧಿಕಾರಿ ಡಾ.ಲಕ್ಷ್ಮಿಕಾಂತ, ಮನೋರೋಗ ತಜ್ಞ ಡಾ.ಮನೋಹರ ಪತ್ತಾರ, ಪಾಲಿಕೆ ಪರಿಸರ ಅಭಿಯಂತರ ಜಯಪಾಲರೆಡ್ಡಿ, ವೈದ್ಯಾಧಿಕಾರಿಗಳಾದ ಡಾ.ಸುನೀಲ್, ಡಾ.ಗುಂಡಮ್ಮ, ಡಾ.ಶ್ವೇತಾಂಬರಿ, ಡಾ.ಸುನೀತಾ ಸೇರಿದಂತೆ ಮಹಾನಗರ ಪಾಲಿಕೆ, ಪೊಲೀಸ್, ಆರೋಗ್ಯ ಇಲಾಖೆಯ ಸಿಬ್ಬಂದಿಯವರು, ಆಶಾ ಕಾರ್ಯಕರ್ತೆಯರು, ಸಾರ್ವಜನಿಕರು ಇದ್ದರು.

ಚಲುವಾದಿ ನಾರಾಯಣಸ್ವಾಮಿ ಮನೆಗೆ ಚಾಕು ರವಾನೆ ಆರೋಪ: ಆರೋಪಿಗಳ ಬಂಧನಕ್ಕೆ ಬಿಜೆಪಿ ಆಗ್ರಹ

ಮಾನ್ವಿ:

ವಿಧಾನ ಪರಿಷತ್ ಸದಸ್ಯರು ಹಾಗೂ ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರಾದ ಚಲುವಾದಿ ನಾರಾಯಣಸ್ವಾಮಿ ಅವರ ವಿಳಾಸಕ್ಕೆ ಆನ್‌ಲೈನ್ ಮೂಲಕ ಚಾಕು ರವಾನೆಯಾದ ಪ್ರಕರಣವನ್ನು ಖಂಡಿಸಿ ಘಟನೆಯ ಹಿಂದಿರುವವರನ್ನು ತಕ್ಷಣ ಬಂಧಿಸಿ ಕಾನೂನು ಕ್ರಮ ಕೈಗೊಳ್ಳುವಂತೆ ಭಾರತೀಯ ಜನತಾ ಪಾರ್ಟಿ ಎಸ್‌ಸಿ ಮೋರ್ಚಾದ ಮಾಜಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಚಂದ್ರು ಜಾನೇಕಲ್ ಆಗ್ರಹಿಸಿದ್ದಾರೆ.ಮುಖ್ಯಮಂತ್ರಿಗಳಿಗೆ ಮಾನ್ವಿ ತಹಸೀಲ್ದಾರರ ಮುಖಾಂತರ ಸಲ್ಲಿಸಿರುವ ಮನವಿಯಲ್ಲಿ, ಚಲುವಾದಿ ನಾರಾಯಣಸ್ವಾಮಿ ಅವರ ಮನೆಗೆ ಚಾಕು ಕಳುಹಿಸಿರುವುದು ಪ್ರಜಾಪ್ರಭುತ್ವದ ಮೌಲ್ಯಗಳಿಗೆ ವಿರುದ್ಧವಾದ ಕೃತ್ಯ ಎಂದು ಆರೋಪಿಸಿದ್ದಾರೆ. ಘಟನೆಯಿಂದ ರಾಜ್ಯದಲ್ಲಿ ಅಶಾಂತಿ ಉಂಟುಮಾಡುವ ಪ್ರಯತ್ನ ನಡೆದಿದ್ದು, ಇದರ ಹಿಂದಿರುವ ವ್ಯಕ್ತಿಗಳು ಹಾಗೂ ಅವರಿಗೆ ಬೆಂಬಲ ನೀಡಿದ ವರನ್ನು ಪತ್ತೆ ಹಚ್ಚಿ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿ ಸಿದ್ದಾರೆ. ಈ ಪ್ರಕರಣದ ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರನ್ನು ಶೀಘ್ರ ಬಂಧಿಸಬೇಕು. ಬೇಡಿಕೆ ಗಳನ್ನು ಸರ್ಕಾರ ಈಡೇರಿಸದಿದ್ದಲ್ಲಿ ಮಾನ್ವಿ ತಾಲೂಕಿನ ಬಿಜೆಪಿ ಮುಖಂಡರ ನೇತೃತ್ವದಲ್ಲಿ ಉಗ್ರ ಹೋರಾಟ ಹಮ್ಮಿಕೊಳ್ಳ ಲಾಗುವುದು ಎಂದು ಮನವಿಯಲ್ಲಿ ಎಚ್ಚರಿಕೆ ನೀಡಲಾಗಿದೆ.

ದೀಪಾವಳಿ ಆಚರಣೆ

ಉಡುಪಿ,

ಪರ್ಕಳ ಸ್ವಾಗತ ಫ್ರೆಂಡ್ಸ್ ಮತ್ತು ನಮ್ ಟೀಮ್ ಮಣಿಪಾಲದ ಜಂಟಿ ಆಶ್ರಯದಲ್ಲಿ ಬೃಹತ್ ಗಾತ್ರದ ಗಜೇಂದ್ರ ದೀಪವನ್ನು ಪ್ರಜ್ವಲಿಸಿ ವಿಶಿಷ್ಟ ರೀತಿಯಲ್ಲಿ ದೀಪಾವಳಿ ಆಚರಿಸಲಾಯಿತು.

ಉದ್ಯಮಿ, ಕಾಂಗ್ರೆಸ್ ಮುಖಂಡ ಪ್ರಸಾದರಾಜ್ ಕಾಂಚನ್ ಶುಭ ಹಾರೈಸಿದ್ದರು.

ತುಳುನಾಡ ರಕ್ಷಣಾ ವೇದಿಕೆಯ ಅಧ್ಯಕ್ಷ ಫ್ರಾಂಕಿ ಡಿಸೋಜ ಮಾತನಾಡಿದರು. ಈ ಸಂದರ್ಭದಲ್ಲಿ ಸ್ವಾಗತ ಫ್ರೆಂಡ್ಸ್ ನ ಮುಖ್ಯಸ್ಥರಾದ ಪರ್ಕಳ ಮೋಹನ್‌ದಾಸ್ ನಾಯಕ್, ಜಯ ಶೆಟ್ಟಿ ಬನ್ನಂಜೆ, ಜಾನ್ ಡಿಸೋಜ ಕೊಳಲಗಿರಿ, ದೇವೇಂದ್ರ ನಾಯ್ಕ್, ಉಪೇಂದ್ರ ನಾಯ್ಕ್,

ಪಿಕೆಸಿ ಕರಾಟೆ ತಂಡದ ಶಿಕ್ಷಕಿ ಪ್ರವೀಣ ಸುವರ್ಣ, ಮತ್ತು ಕರಾಟೆ ತಂಡದ ಸದಸ್ಯರಾದ ಸ್ವಪ್ನ ಶಂಕರ್ ನಾಯಕ್, ದೇವಿಪ್ರಸಾದ್ ಆಚಾರ್ಯ, ಸದಾನಂದ ಪೂಜಾರಿ, ಸಚ್ಚಿದಾನಂದ ಕುಲಾಲ್, ಸುಮಿತ್ ಎಸ್.ಶೆಟ್ಟಿ, ರಾಘವೇಂದ್ರ ಆಚಾರ್ಯ, ಸುರೇಂದ್ರ ನಾಯಕ್, ಕಾರ್ಯಕ್ರಮ ಸಂಘಟಕ ಗಣೇಶ್‌ರಾಜ್ ಸರಳೆಬೆಟ್ಟು ಮೊದಲಾದವರು ಉಪಸ್ಥಿತರಿದ್ದರು.

ಚಂದ್ರಬಂಡಾ ಶ್ರೀ ಬಂಡೆ ರಂಗನಾಥಸ್ವಾಮಿ ದೇವಸ್ಥಾನದಲ್ಲಿ ನ.10ರಿಂದ 12ರವರೆಗೆ ಜಾತ್ರಾ ಮಹೋತ್ಸವ ರಾಜ್ಯ ಹಾಗೂ ರಾಷ್ಟ್ರಮಟ್ಟದ ಎತ್ತುಗಳಿಂದ ಬಂಡೆ ಕಲ್ಲು ಎಳೆಯುವ ಸ್ಪರ್ಧೆ ಆಯೋಜನೆ




ರಾಯಚೂರು:

ತಾಲೂಕಿನ ಚಂದ್ರಬಂಡಾ ಗ್ರಾಮದ ಪ್ರಸಿದ್ಧ ಧಾರ್ಮಿಕ ಕ್ಷೇತ್ರವಾದ ಶ್ರೀ ಬಂಡೆ ರಂಗನಾಥಸ್ವಾಮಿ ದೇವಸ್ಥಾನದಲ್ಲಿ ದೀಪಾವಳಿ ಹಬ್ಬದ ಅಂಗವಾಗಿ ನವೆಂಬರ್ 10ರಿಂದ 12ರವರೆಗೆ ಮೂರು ದಿನಗಳ ಕಾಲ ಜಾತ್ರಾ ಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲು ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ ಎಂದು ಬುದಯ್ಯ ಸ್ವಾಮಿ ತಿಳಿಸಿದರು. ಜಿಜಿನಗರದಲ್ಲಿ ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತಿವರ್ಷ ದೀಪಾವಳಿ ಸಂದರ್ಭದಲ್ಲಿ ಚಂದ್ರಬಂಡಾ ಗ್ರಾಮದಲ್ಲಿ ಶ್ರೀ ಬಂಡೆ ರಂಗನಾಥಸ್ವಾಮಿ ಜಾತ್ರೆಯನ್ನು ಸಾಂಪ್ರದಾಯಿಕವಾಗಿ ಆಚರಿಸಿಕೊಂಡು ಬರಲಾಗುತ್ತಿದೆ. ಈ ವರ್ಷವೂ ಧಾರ್ಮಿಕ ವಿಧಿವಿಧಾನಗಳೊಂದಿಗೆ ಜಾತ್ರೆ ನಡೆಸಲು ದೇವಸ್ಥಾನದ ಆಡಳಿತ ಮಂಡಳಿ ಹಾಗೂ ಗ್ರಾಮಸ್ಥರು ಸಿದ್ಧತೆ ಮಾಡಿಕೊಂಡಿದ್ದಾರೆ. ಜಾತ್ರೆಯ ಪ್ರಮುಖ ಆಕರ್ಷಣೆಯಾಗಿ ರಾಜ್ಯ ಹಾಗೂ ರಾಷ್ಟ್ರಮಟ್ಟದ ಎತ್ತುಗಳಿಂದ ಬಂಡೆಕಲ್ಲು ಎಳೆಯುವ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ ಎಂದರು.ಜಿಜಿನವೆಂಬರ್ 10ರಂದು ಮಂಗಳವಾರ ಸಂಜೆ 4 ಗಂಟೆಗೆ ಶ್ರೀ ಬಂಡೆ ರಂಗನಾಥಸ್ವಾಮಿಯ ಉಚ್ಛಾಯ ಕಾರ್ಯಕ್ರಮ ನಡೆಯಲಿದ್ದು, ಜಾತ್ರಾ ಮಹೋತ್ಸವಕ್ಕೆ ಚಾಲನೆ ದೊರೆಯಲಿದೆ. ನವೆಂಬರ್ 11ರಂದು ಬುಧವಾರ ಬೆಳಿಗ್ಗೆ 9 ಗಂಟೆಯಿಂದ ಕರ್ನಾಟಕ ರಾಜ್ಯದ ಜನರಲ್ ಕೆಟಗರಿ ಎತ್ತುಗಳಿಗೆ 11 ಕ್ವಿಂಟಾಲ್ ತೂಕದ ಬಂಡೆ ಕಲ್ಲು ಎಳೆಯುವ ಸ್ಪರ್ಧೆ ನಡೆಯಲಿದೆ.ಜಿಜಿಈ ಸ್ಪರ್ಧೆಯಲ್ಲಿ ವಿಜೇತರಿಗೆ ಪ್ರಥಮ ಬಹುಮಾನ ₹30 ಸಾವಿರ, ದ್ವಿತೀಯ ₹20 ಸಾವಿರ, ತೃತೀಯ ₹10 ಸಾವಿರ, ನಾಲ್ಕನೇ ₹8 ಸಾವಿರ, ಐದನೇ ₹5 ಸಾವಿರ ಹಾಗೂ ಆರನೇ ಬಹುಮಾನ ₹3 ಸಾವಿರ ನೀಡಲಾಗುವುದು.ಜಿಜಿನವೆಂಬರ್ 12ರಂದು ಗುರುವಾರ ಬೆಳಿಗ್ಗೆ 9 ಗಂಟೆಗೆ ರಾಷ್ಟ್ರಮಟ್ಟದ ಒಂಗೋಲ್ ನ್ಯೂ ಕೆಟಗರಿ ಎತ್ತುಗಳಿಂದ 14 ಕ್ವಿಂಟಾಲ್ ತೂಕದ ಬಂಡೆ ಕಲ್ಲು ಎಳೆಯುವ ಸ್ಪರ್ಧೆ ನಡೆಯಲಿದೆ. ವಿವಿಧ ರಾಜ್ಯಗಳ ಎತ್ತುಗಳು ಭಾಗವಹಿಸಲು ಅವಕಾಶ ಕಲ್ಪಿಸಲಾಗಿದ್ದು, ವಿಜೇತರಿಗೆ ಪ್ರಥಮ ಬಹುಮಾನ ₹50 ಸಾವಿರ, ದ್ವಿತೀಯ ₹40 ಸಾವಿರ, ತೃತೀಯ ₹30 ಸಾವಿರ, ನಾಲ್ಕನೇ ₹20 ಸಾವಿರ, ಐದನೇ ₹10 ಸಾವಿರ, ಆರನೇ ₹8 ಸಾವಿರ, ಏಳನೇ ₹6 ಸಾವಿರ ಹಾಗೂ ಎಂಟನೇ ಬಹುಮಾನ ₹5 ಸಾವಿರ ನೀಡಲಾಗುವುದು ಎಂದು ತಿಳಿಸಿದರು.ಜಿಜಿಗ್ರಾಮೀಣ ಭಾಗದ ಸಾಂಪ್ರದಾಯಿಕ ಕ್ರೀಡೆಗಳಲ್ಲಿ ಒಂದಾದ ಎತ್ತುಗಳಿಂದ ಬಂಡೆ ಕಲ್ಲು ಎಳೆಯುವ ಸ್ಪರ್ಧೆ ಜಾತ್ರೆಯ ಪ್ರಮುಖ ಆಕರ್ಷಣೆಯಾಗಿದ್ದು, ಸುತ್ತಮುತ್ತಲಿನ ಗ್ರಾಮಗಳು ಹಾಗೂ ವಿವಿಧ ಜಿಲ್ಲೆಗಳಿಂದ ರೈತರು, ಪಶುಪಾಲಕರು ಮತ್ತು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವ ನಿರೀಕ್ಷೆಯಿದೆ. ಎರಡೂ ಸ್ಪರ್ಧೆಗಳ ಬಹುಮಾನಗಳಿಗೆ ಚಂದ್ರಬಂಡಾ ಗ್ರಾಮದ ದಾನಿಗಳು ಪ್ರಾಯೋಜಕತ್ವ ವಹಿಸಿಕೊಂಡಿದ್ದಾರೆ. ಜಾತ್ರೆಗೆ ಆಗಮಿಸುವ ಭಕ್ತರು ಹಾಗೂ ಸಾರ್ವಜನಿಕರ ಅನುಕೂಲಕ್ಕಾಗಿ ನವೆಂಬರ್ 11 ಮತ್ತು 12ರಂದು ಅನ್ನದಾಸೋಹ ಹಾಗೂ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ. ಜಾತ್ರೆಯನ್ನು ಶಾಂತಿಯುತವಾಗಿ ಹಾಗೂ ಯಶಸ್ವಿಯಾಗಿ ನಡೆಸಲು ಗ್ರಾಮಸ್ಥರು ಮತ್ತು ದೇವಸ್ಥಾನದ ಭಕ್ತರು ಸಹಕಾರ ನೀಡುತ್ತಿದ್ದಾರೆ.ಜಿಜಿಜಾತ್ರಾ ಮಹೋತ್ಸವದಲ್ಲಿ ರಾಯಚೂರು ಜಿಲ್ಲೆ ಸೇರಿದಂತೆ ವಿವಿಧ ಭಾಗಗಳ ಭಕ್ತರು, ರೈತರು ಹಾಗೂ ಎತ್ತುಗಳ ಸ್ಪರ್ಧೆಯ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮದ ಯಶಸ್ಸಿಗೆ ಕೈಜೋಡಿಸಬೇಕು ಎಂದು ಬುದಯ್ಯ ಸ್ವಾಮಿ ಮನವಿ ಮಾಡಿದರು.ಜಿಜಿಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ 8660975515 ಅಥವಾ 9740346454 ಸಂಪರ್ಕಿಸಬಹುದು. ಪತ್ರಿಕಾಗೋಷ್ಠಿಯಲ್ಲಿ ರಾಜಯ್ಯ ಶೆಟ್ಟಿ ಹಾಗೂ ನರಸಿಂಗರಾವ್ ಕುಲಕರ್ಣಿ ಉಪಸ್ಥಿತರಿದ್ದರು.

ಜನವರಿ ಅಂತ್ಯದವರೆಗೆ ಕಾಲುವೆಗಳಿಗೆ ನೀರು ಹರಿಸಿ, ಇಲ್ಲದಿದ್ದರೆ ಧರಣಿ: ಮಲ್ಲಿಕಾರ್ಜುನ ಸತ್ಯಂಪೇಟೆ ಎಚ್ಚರಿಕೆ

ಶಹಾಪುರ:

ರೈತರು ಬೆಳೆದಿರುವ ಮೆಣಸಿನಕಾಯಿ, ಶೇಂಗಾ, ಜೋಳ ಮತ್ತು ಸಜ್ಜೆ ಬೆಳೆಗಳಿಗೆ ಇನ್ನೂ ನೀರಿನ ಅಗತ್ಯವಿದ್ದು, ಜನವರಿ ಅಂತ್ಯದವರೆಗೂ ಕಾಲುವೆಗಳಿಗೆ ನೀರು ಹರಿಸಬೇಕು. ಇಲ್ಲವಾದಲ್ಲಿ ಕೆಬಿಜೆಎನ್‌ಎಲ್‌ನ ಭೀಮರಾಯನಗುಡಿ ಕಚೇರಿ ಮುಂದೆ ಧರಣಿ ಆರಂಭಿಸ ಲಾಗುವುದು ಎಂದು ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಉಪಾಧ್ಯಕ್ಷ ಮಲ್ಲಿಕಾರ್ಜುನ ಸತ್ಯಂಪೇಟೆ ಎಚ್ಚರಿಸಿದರು.



ನಗರದ ಪ್ರವಾಸಿ ಮಂದಿರದಲ್ಲಿ ನಡೆದ ಸಭೆಯ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಬಸವಸಾಗರ ಜಲಾಶಯದ ಕೃಷ್ಣಾ ಎಡದಂಡೆ ಮತ್ತು ಬಲದಂಡೆ ಕಾಲುವೆಗಳ ವ್ಯಾಪ್ತಿಯ ರಾಯಚೂರು, ಯಾದಗಿರಿ ಹಾಗೂ ಕಲಬುರಗಿ ಜಿಲ್ಲೆಗಳ ಸಾವಿರಾರು ಎಕರೆ ಜಮೀನುಗಳಲ್ಲಿ ಮೆಣಸಿ ನಕಾಯಿ, ಶೇಂಗಾ, ಬಿಳಿ ಜೋಳ ಮತ್ತು ಸಜ್ಜೆ ಬೆಳೆಗಳನ್ನು ಬೆಳೆಯಲಾಗಿದೆ. ಮೂರು ಜಿಲ್ಲೆಗಳಲ್ಲಿ ಅಂದಾಜು 74 ಸಾವಿರ ಎಕರೆ ಪ್ರದೇಶದಲ್ಲಿ ಮೆಣಸಿನಕಾಯಿ ಬೆಳೆ ಬೆಳೆಯ ಲಾಗಿದ್ದು, ಪ್ರತಿ ಎಕರೆಗೆ ಸುಮಾರು 6ರಿಂದ 7 ಲಕ್ಷ ರೂಪಾಯಿ ವೆಚ್ಚ ಮಾಡಲಾಗಿದೆ. ಒಟ್ಟಾರೆ ರೈತರು ಸುಮಾರು ಒಂದು ಸಾವಿರ ಕೋಟಿ ರೂಪಾಯಿ ಬಂಡವಾಳ ಹೂಡಿದ್ದಾರೆ ಎಂದು ತಿಳಿಸಿದರು. ನೀರಾವರಿ ಸಲಹಾ ಸಮಿತಿಯ ತೀರ್ಮಾ ನದಂತೆ ನವೆಂಬರ್ 12ರಂದು ನೀರು ಹರಿಸುವುದನ್ನು ಸ್ಥಗಿತಗೊಳಿಸಿದರೆ ರೈತರಿಗೆ ದೊಡ್ಡ ಮಟ್ಟದ ನಷ್ಟ ಉಂಟಾಗಲಿದೆ. ಇದಕ್ಕೆ ಸರ್ಕಾರವೇ ಹೊಣೆ ಹೊರಬೇಕಾ ಗುತ್ತದೆ. ಆರಂಭದಲ್ಲಿ ನೀರಿನ ಕೊರತೆಯ ಕುರಿತು ಯಾವುದೇ ಹೇಳಿಕೆ ನೀಡದ ಸರ್ಕಾರ, ರೈತರು ಬೆಳೆ ಬೆಳೆದ ನಂತರ ನೀರಾವರಿ ಸಲಹಾ ಸಮಿತಿಯ ಮೂಲಕ ನೀರು ಸ್ಥಗಿತಗೊಳಿಸುವ ತೀರ್ಮಾನ ಕೈಗೊಂಡಿರುವುದರಿಂದ ರೈತರು ದಿಕ್ಕು ತೋಚದಂತಾಗಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈಗಾಗಲೇ ಸಾಲ ಮಾಡಿ ಕೃಷಿ ಮಾಡುತ್ತಿರುವ ರೈತರಿಗೆ ನೀರು ಸಿಗದಿದ್ದರೆ ತೀವ್ರ ಸಂಕಷ್ಟ ಎದುರಾಗಲಿದೆ. ಸಭೆಯಲ್ಲಿ ಸಂಘಟನೆಯ ಜಿಲ್ಲಾಧ್ಯಕ್ಷ ಶರಣು ಮಂದರವಾಡ, ಜಿಲ್ಲಾ ಕಾರ್ಯಾಧ್ಯಕ್ಷ ಮುದ್ದಣ್ಣ ಅಮ್ಮಾಪುರ, ಮಲ್ಕಣ್ಣ ಚಿಂತಿ ಮಂಡಗಳ್ಳಿ, ಜಿಲ್ಲಾ ಕಾರ್ಯದರ್ಶಿ ಬುಚ್ಚಪ್ಪ ನಾಯಕ, ಫಕೀರ ಅಹ್ಮದ್ ಸಾಬ್, ಮಲ್ಲು ವಡಿಗೇರಿ, ದೇವಿಂದ್ರಪ್ಪ ವಡಿಗೇರಿ, ಮಹಾದೇವ ಸಾಹುಕಾರ, ಗುರುನಾಥ ರೆಡ್ಡಿ ರಸ್ತಾಪುರ, ಅಮರಣ್ಣ ಸಾಹುಕಾರ ರಸ್ತಾಪುರ, ರಾಚಣ್ಣ ಸಾಹುಕಾರ ರಸ್ತಾಪುರ, ಭೀಮಣ್ಣ ಗೌಡ ಹಾರಣಗೇರ, ಶಿವಣ್ಣಗೌಡ ಹೈಯ್ಯಾಳ ಸೇರಿದಂತೆ ಹಲವರು ಭಾಗವಹಿಸಿದ್ದರು.

ನಿಮ್ಮೂರು ಸುದ್ದಿ

ಸಂಪಾದಕೀಯ



ಬೆಳಕಿನ ಹಬ್ಬ ತರದಿರಲಿ ಹಲವರ ಬದುಕಿಗೆ ಕತ್ತಲೆ

ಅರಿವು ಹಾಗೂ ಅದರ ಸಂಕೇತವಾದ ಬೆಳಕಿನ ವಿಸ್ತರಣೆ ಆಗಬೇಕಿದ್ದ ದೀಪಾವಳಿಯು ಪ್ರತಿಷ್ಠೆಗೆ ಕಾರಣವಾಗಿ ಮದ್ದು ಸುಡುವುದು ಮುಂದುವರೆದು ಜನ ಅದರಲ್ಲೂ ವಿಶೇಷವಾಗಿ ಮಕ್ಕಳು ಕಣ್ಣು ಕಳೆದುಕೊಂಡು ಶಾಶ್ವತ ಅಂಧತ್ವ ಮತ್ತು ಕತ್ತಲೆಯಡೆಗೆ ಮುಖ ಮಾಡುವಂತಾಗಿದೆ. ಇದು ಒಳ್ಳೆಯ ಬೆಳವಣಿಗೆಯೇನಲ್ಲ.

ಬೆಳಕಿನ ಹಬ್ಬ ದೀಪಾವಳಿ. ಹೊರಗಿನ ಕತ್ತಲಿನ ಜೊತೆಗೆ ಒಳಗಿನ ಕತ್ತಲನ್ನೂ ದೂರ ಆಗಿಸುವ ಆಶಯದ ಹಬ್ಬ. ಸಹಜವಾಗಿಯೇ ಅದರ ಆಚರಣೆಗಳೂ ಈ ಆಶಯಕ್ಕೆ ಪೂರಕವಾಗಿಯೇ ಇವೆ. ಜ್ಯೋತಿಯ ಬಲದಿಂದ ತಮಂಧದ ಕೇಡು ಎಂದ ಮನಸ್ಸು ಗಳೇ ಜ್ಞಾನದ ಬಲದಿಂದ ಅಜ್ಞಾನದ ಕೇಡ ಬಯಸಿದ್ದವು. ಕತ್ತಲು ಮತ್ತು ಬೆಳಕುಗಳೆರಡನ್ನು ಕಾಣಲು -ಅನುಭವಿಸಲು ಕಣ್ಣುಗಳು ಬೇಕು. ಭೌತಿಕ ಕಣ್ಣುಗಳ ಮೂಲಕ ನೋಡಿದರೆ, ನೋಡಿದಾಗ ಮಾತ್ರ ಬಣ್ಣಗಳ ಮತ್ತು ಬೆಳಕಿನ ಲೋಕ ಗೋಚರವಾಗುತ್ತದೆ. ಅರಿವಿಗೆ ಬರುತ್ತದೆ. ಇಂತಹ ಬೆಳಕನ್ನು ಕಾಣಿಸುವ ಕಣ್ಣುಗಳೇ ಬೆಳಕಿನ ಹಬ್ಬದ ದಿನಗಳಲ್ಲಿ ಕಳೆದು ಹೋಗುವುದೇ ವೈಪರೀತ್ಯ. ವಿಚಿತ್ರ ಮತ್ತು ವಿಷಾದದ ಸಂಗತಿ.

ಕಳೆದ ನಾಲ್ಕು ದಿನಗಳ ಅವಧಿಯಲ್ಲಿ ಅಂದರೆ 2026ರ ದೀಪಾವಳಿಯಲ್ಲಿ ಬೆಂಗಳೂರಿನ ವಿವಿಧ ಕಣ್ಣಿನ ಆಸ್ಪತ್ರೆಗೆ ಬಂದ ಪ್ರಕರಣಗಳ ಸಂಖ್ಯೆ 117. ರಾಜ್ಯ ಸರ್ಕಾರ ನಡೆಸುವ ಮಿಂಟೋ ಆಸ್ಪತ್ರೆಯಲ್ಲಿ ಈ ಸಲ ದಾಖಲಾದವರ ಸಂಖ್ಯೆ 20ಕ್ಕೂ ಹೆಚ್ಚು. ಬೆಂಗಳೂರಿನ ರಾಜಾಜಿನಗರ ಪ್ರದೇಶದಲ್ಲಿ ಈ ಕಣ್ಣಿನ ಆಸ್ಪತ್ರೆಗೆ ಬಂದವರ ಸಂಖ್ಯೆ 40ಕ್ಕೂ ಹೆಚ್ಚು. ಹೀಗೆ ಕಣ್ಣಿನ ಆಸ್ಪತ್ರೆಗೆ ಬರುವುದು ಮತ್ತು ವರದಿಯಾಗುವುದು ಗಂಭೀರ ಪ್ರಕರಣಗಳು ಮಾತ್ರ. ಸಣ್ಣಪುಟ್ಟ ಅವಘಡಗಳು ಮತ್ತು ಸುಟ್ಟಗಾಯದ ಪ್ರಕರಣಗಳು ಲೆಕ್ಕಕ್ಕೇ ಇಲ್ಲ. ಹೀಗೆ ದಾಖಲಾದವರ ಪೈಕಿ ಶೇ. 80ರಷ್ಟು ಪ್ರಕರಣಗಳು ದೃಷ್ಟಿ ಕಳೆದುಕೊಳ್ಳುವ ಮಟ್ಟಿಗೆ ಇರುತ್ತವೆ ಎಂಬುದು ಸಮಸ್ಯೆಯ ಗಂಭೀರತೆಯನ್ನು ಸೂಚಿಸುತ್ತದೆ.

ಪಟಾಕಿಯಿಂದ ಕಣ್ಣಿನ ಸಮಸ್ಯೆಗೆ ಒಳಗಾಗುವವರು ಕೇವಲ ಸಿಡಿಸುವವರು ಮಾತ್ರವಲ್ಲ. ಹಾದಿಹೋಕರು, ದೂರದಲ್ಲಿ ನಿಂತು ನೋಡುವವರೂ ಬಲಿಯಾಗಿರುತ್ತಾರೆ. ಕಣ್ಣು ಕಳೆದುಕೊಳ್ಳುವವರ ಪೈಕಿ ಶೇ. 75ರಷ್ಟು ಜನ ಮುಂದೆ ಬಾಳಿ ಬದುಕಬೇಕಾದ ಮಕ್ಕಳು. ಸತತ ಆರು ತಿಂಗಳ ಚಿಕಿತ್ಸೆ ಯ ನಂತರ ಅಂಧತ್ವದ ಪ್ರಮಾಣ ಗೊತ್ತಾಗುತ್ತದೆ. ಈ ಪ್ರಕರಣಗಳನ್ನು ಅಪಘಾತ- ಆಕಸ್ಮಿಕಗಳ ಪಟ್ಟಿಗೆ ಸೇರಿಸಿ ಸುಮ್ಮನಾಗಬೇಕಿಲ್ಲ. ನಾಗರಿಕ ಸಮಾಜ ಇದರ ಹೊಣೆ ಹೊರಬೇಕು.

ಕಳೆದ ಮೂರು ದಶಕಗಳ ಅವಧಿಯಲ್ಲಿ ವರ್ಷಕ್ಕೆ ಸರಾಸರಿ ನೂರು ಪ್ರಕರಣಗಳಂತೆ ಲೆಕ್ಕಕ್ಕೆ ತೆಗೆದುಕೊಂಡರೆ ಬೆಳಕಿನ ಹಬ್ಬದ ಅಂಗವಾಗಿ ಮದ್ದು ಸುಡುವುದರಿಂದ ಕಣ್ಣಿಗೆ ಗಾಯ ಮಾಡಿಕೊಂಡವರ ಸಂಖ್ಯೆ ಮೂರು ಸಾವಿರ ದಾಟಿದರೆ ಕಣ್ಣು ಕಳೆದುಕೊಂಡವರ ಸಂಖ್ಯೆಯು ಎರಡು ಸಾವಿರ ದಾಟುತ್ತದೆ. ಇದು ಕೇವಲ ಬೆಂಗಳೂರು ನಗರದ ಅಂಕಿ ಅಂಶಗಳು. ನಗರದ ಹೊರಗೆ ಕರ್ನಾಟಕದಾದ್ಯಂತ ನಡೆಯುವ ಪಟಾಕಿ ದುರಂತಗಳ ಬಗ್ಗೆ ಯಾವುದೇ ಅಂಕಿ ಅಂಶಗಳನ್ನು ದಾಖಲಿಸುವ ವ್ಯವಸ್ಥೆಯೇ ಇಲ್ಲ. ದಾಖಲೆಗಳೇ ಇಲ್ಲದಿರುವುದು ಅದರ ಬಗೆಗಿನ ಅಸಡ್ಡೆ- ಅವಜ್ಞೆ ಮುಂದುವರೆಯಲು ಕಾರಣವಾಗಿದೆ. ಇದು ನಿಲ್ಲಬೇಕು. ದೀಪಾವಳಿಯ ಹೊತ್ತಿನಲ್ಲಿ ಒಬ್ಬರು ಕೂಡ ಕಣ್ಣು ಕಳೆದುಕೊಳ್ಳದಂತಹ ಸ್ಥಿತಿ ರೂಪಿಸುವ ಹೊಣೆಗಾರಿಕೆ ಸಮಾಜ ಸಮುದಾಯದ ಮೇಲಿದೆ.

ಈ ಶತಮಾನದ ಆರಂಭದ ಮೊದಲ ಒಂದೂವರೆ ದಶಕದಲ್ಲಿ ಪಟಾಕಿ ಸುಡುವ ಪ್ರಮಾಣ ಕಡಿಮೆಯಾಗತೊಡಗಿತ್ತು. ಅದಕ್ಕೆ ಪರಿಸರದ ಮೇಲೆ ಪಟಾಕಿಗಳು ಉಂಟು ಮಾಡುವ ಪರಿಣಾಮದ ಬಗ್ಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ನಡೆದ ವೈಚಾರಿಕ + ಪ್ರಗತಿಪರ ಆಲೋಚನೆಗಳ ಜೊತೆಯಲ್ಲಿಯೇ ಸುಪ್ರೀಂಕೋರ್ಟಿನ ಹಸಿರು ಪಟಾಕಿ ನಿರ್ದೇಶನ ಹಾಗೂ ಶಾಲೆ-ಕಾಲೇಜುಗಳಲ್ಲಿ ನಡೆಸಲಾದ ಅರಿವು ಮೂಡಿಸುವ ಅಭಿಯಾನಗಳು ಕೂಡ ಗಣನೀಯ ಕೊಡುಗೆ ನೀಡಿದ್ದವು. ಸಹಜವಾಗಿಯೇ ಪಟಾಕಿ ಸುಡುವುದರ ಪ್ರಮಾಣ ಕಡಿಮೆಯಾದ ಪ್ರಮಾಣದಲ್ಲಿಯೇ ಕಣ್ಣುಕಳೆದುಕೊಳ್ಳುವವರ ಸಂಖ್ಯೆಯೂ ಇಳಿಮುಖವಾಗಿತ್ತು.

ಆದರೆ, ಕಳೆದ ಒಂದು ದಶಕದ ಅವಧಿಯಲ್ಲಿ ಮುಂಚೂಣಿಗೆ ಬಂದ ನಮ್ಮ ಸಂಸ್ಕೃತಿ, ನಮ್ಮ ಹೆಮ್ಮೆ ರೀತಿಯ ಧೋರಣೆಯು ಪಟಾಕಿಗಳ ಜೊತೆಗೆ ಅವುಗಳಿಂದ ಉಂಟಾಗುವ ಅವಘಡವೂ ಪರಂಪರೆಯ ಭಾಗ ಆಗತೊಡಗಿದೆ. ಈ ಸಾಮಾಜಿಕ ಹಿಂಚಲನೆಗೆ ಪಟಾಕಿ ಸಿಡಿಸುವುದರಿಂದ ದುಷ್ಟಶಕ್ತಿಗಳು ನಾಶವಾಗುತ್ತವೆ ಎಂಬ ಸಮರ್ಥನೆ + ಮೂಢನಂಬಿಕೆಗಳೂ ಕಾರಣ. ಅರಿವು ಹಾಗೂ ಅದರ ಸಂಕೇತವಾದ ಬೆಳಕಿನ ವಿಸ್ತರಣೆ ಆಗಬೇಕಿದ್ದ ದೀಪಾವಳಿಯು ಪ್ರತಿಷ್ಠೆಗೆ ಕಾರಣವಾಗಿ ಮದ್ದು ಸುಡುವುದು ಮುಂದುವರೆದು ಜನ ಅದರಲ್ಲೂ ವಿಶೇಷವಾಗಿ ಮಕ್ಕಳು ಕಣ್ಣು ಕಳೆದುಕೊಂಡು ಶಾಶ್ವತ ಅಂಧತ್ವ ಮತ್ತು ಕತ್ತಲೆಯಡೆಗೆ ಮುಖ ಮಾಡುವಂತಾಗಿದೆ. ಇದು ಒಳ್ಳೆಯ ಬೆಳವಣಿಗೆಯೇನಲ್ಲ. ಬೆಳಕಿನ ಹಬ್ಬವೇ ಹಲವರ ಬದುಕಿನ ಕತ್ತಲೆ ಹರಡಲು ಕಾರಣವಾಗಿರುವುದು ಒಳ್ಳೆಯ ಲಕ್ಷಣವಲ್ಲ. ಇನ್ನು ಮುಂದಾದರೂ ಎಚ್ಚೆತ್ತುಕೊಳ್ಳಬೇಕು. ಬೆಳಕು ಮತ್ತು ಅದರ ಅನುಭವ ಉಂಟು ಮಾಡುವ ಕಣ್ಣುಗಳು ಕಳೆದು ಹೋಗದಂತೆ ನೋಡಿಕೊಳ್ಳುವುದು ಕೇವಲ ನೈತಿಕ ಹೊಣೆಗಾರಿಕೆ ಮಾತ್ರವಲ್ಲ.

ಟ್ರಂಪ್‌ಗೆ ಮುಖಭಂಗ, ಯುರೋಪಿನಲ್ಲಿ ಆತಂಕ; ಜಗತ್ತಿನಲ್ಲಿ ಬದಲಾಗುತ್ತಿರುವ ಬಲಪಂಥೀಯ ರಾಜಕೀಯ?

2026ರ ಅಮೆರಿಕ ಮತ್ತು ಬ್ರೆಜಿಲ್‌ನ ಚುನಾವಣಾ ಫಲಿತಾಂಶಗಳು ಜಾಗತಿಕ ಮಟ್ಟದಲ್ಲಿ ರಾಜಕೀಯ ಒಲವಿನ ಬದಲಾವಣೆಯನ್ನು ದೃಢಪಡಿಸಿವೆ. ಡೆಮಾಕ್ರಟರು ಸಾಧಿಸಿದ 255 ಹೌಸ್ ಮತ್ತು 54 ಸೆನೆಟ್ ಸ್ಥಾನಗಳ ಜಯ, ಹಾಗೂ ಬ್ರೆಜಿಲ್‌ನಲ್ಲಿನ ಅಧಿಕಾರ ಬದಲಾವಣೆಯು ಜನಪ್ರಿಯತಾವಾದಿ ಸಿದ್ಧಾಂತವು ಜನಬೆಂಬಲ ಕಳೆದುಕೊಳ್ಳುತ್ತಿರುವುದರ ಸ್ಪಷ್ಟ ನಿದರ್ಶನಗಳಾಗಿವೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕೇವಲ ಸೈದ್ಧಾಂತಿಕ ಧ್ರುವೀಕರಣದ ಆಧಾರದ ಮೇಲೆ ದೀರ್ಘಕಾಲ ಆಡಳಿತ ನಡೆಸಲು ಸಾಧ್ಯವಿಲ್ಲ ಎಂಬುದನ್ನು ಮತದಾರರು ಜಗತ್ತಿಗೆ ಸಾರಿದ್ದಾರೆ.



ಕಳೆದ ಒಂದು ದಶಕದಿಂದ ಜಗತ್ತಿನ ವಿವಿಧ ರಾಷ್ಟ್ರಗಳಲ್ಲಿ ಅತ್ಯಂತ ಪ್ರಭಾವಶಾಲಿಯಾಗಿ ಬೆಳೆದು ನಿಂತಿದ್ದ ಬಲಪಂಥೀಯ ಮತ್ತು ಜನಪ್ರಿಯತಾವಾದಿ ರಾಜಕಾರಣವು ಈಗ ಗಮನಾರ್ಹವಾದ ಚುನಾವಣಾ ಸವಾಲುಗಳನ್ನು ಎದುರಿಸುತ್ತಿದೆ. ಜಾಗತಿಕ ರಾಜಕಾರಣದಲ್ಲಿ ಇದೊಂದು ಮಹತ್ವದ ತಿರುವಾಗಿದ್ದು, ಜನರ ರಾಜಕೀಯ ಒಲವು ಸ್ಪಷ್ಟವಾಗಿ ಬದಲಾಗುತ್ತಿದೆ ಎಂಬುದಕ್ಕೆ ಇತ್ತೀಚಿನ ಚುನಾವಣೆಗಳು ಬಲವಾದ ಸಾಕ್ಷಿಯಾಗಿವೆ. ವಿಶೇಷವಾಗಿ ಪ್ರಜಾಪ್ರಭುತ್ವದ ಅತಿದೊಡ್ಡ ರಾಷ್ಟ್ರಗಳಾದ ಅಮೆರಿಕ ಮತ್ತು ಬ್ರೆಜಿಲ್‌ನಲ್ಲಿ ಇತ್ತೀಚೆಗೆ ನಡೆದ ಚುನಾವಣಾ ಫಲಿತಾಂಶಗಳು ಬಲಪಂಥೀಯ ರಾಜಕೀಯದ ಕುಸಿತವನ್ನು ಜಗತ್ತಿಗೆ ನಿಚ್ಚಳವಾಗಿ ಸಾರಿ ಹೇಳಿವೆ. ಕೇವಲ ಭಾವನಾತ್ಮಕ ವಿಚಾರಗಳು ಮತ್ತು ಸೈದ್ಧಾಂತಿಕ ಧ್ರುವೀಕರಣವನ್ನು ಮುಂದಿಟ್ಟುಕೊಂಡು ಜನಬೆಂಬಲವನ್ನು ಕಾಯ್ದುಕೊಳ್ಳಲು ಸಾಧ್ಯವಿಲ್ಲ ಎಂಬುದನ್ನು ಮತದಾರರು ತಮ್ಮ ತೀರ್ಪಿನ ಮೂಲಕ ಸ್ಪಷ್ಟಪಡಿಸಿದ್ದಾರೆ. ಈ ಎಲ್ಲಾ ಬೆಳವಣಿಗೆಗಳನ್ನು ಒಟ್ಟಾರೆಯಾಗಿ ಗಮನಿಸಿದಾಗ, ಜಾಗತಿಕ ಮಟ್ಟದಲ್ಲಿ ಬಲಪಂಥೀಯ ಸಿದ್ಧಾಂತವು ತನ್ನ ಹಿಂದಿನ ಜನಪ್ರಿಯತೆಯನ್ನು ಕಳೆದುಕೊಳ್ಳುತ್ತಿರುವುದು ಗೋಚರಿಸುತ್ತಿದೆ.

ರಾಜಕೀಯ ಒಲವಿನ ಈ ಬದಲಾವಣೆಗೆ ಅಮೆರಿಕದ 2026ರ ಮಧ್ಯಂತರ ಚುನಾವಣೆಗಳು ಅತ್ಯಂತ ದೊಡ್ಡ ಹಾಗೂ ನೇರ ಉದಾಹರಣೆಯಾಗಿ ನಿಲ್ಲುತ್ತವೆ. ಚುನಾವಣೆಯ ಅಂತಿಮ ಹಂತದ ವರದಿಗಳ ಅಂಕಿ-ಅಂಶಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ಡೆಮಾಕ್ರಟಿಕ್ ಪಕ್ಷವು ಪ್ರತಿನಿಧಿಗಳ ಸಭೆಯಲ್ಲಿ (ಹೌಸ್ ಆಫ್ ರೆಪ್ರೆಸೆಂಟೇಟಿವ್ಸ್) 255 ಸ್ಥಾನಗಳನ್ನು ಗೆದ್ದುಕೊಂಡು ಬಹುದೊಡ್ಡ ಬಹುಮತವನ್ನು ಸಾಧಿಸಿದೆ. ಅಷ್ಟೇ ಅಲ್ಲದೆ, ಪ್ರಭಾವಿ ಮೇಲ್ಮನೆಯಾದ ಅಮೆರಿಕದ ಸೆನೆಟ್‌ನಲ್ಲಿಯೂ ಡೆಮಾಕ್ರಟರು 54 ಸ್ಥಾನಗಳನ್ನು ತಲುಪುವ ಮೂಲಕ ತಮ್ಮ ಶಾಸಕಾಂಗದ ಹಿಡಿತವನ್ನು ಸಂಪೂರ್ಣವಾಗಿ ಬಿಗಿಗೊಳಿಸಿದ್ದಾರೆ. ಈ ಗೆಲುವು ರಿಪಬ್ಲಿಕನ್ ಪಕ್ಷದ ಇತ್ತೀಚಿನ ನೀತಿಗಳಿಗೆ ದೇಶದ ಮತದಾರರು ನೀಡಿದ ಸ್ಪಷ್ಟ ಪ್ರತಿಕ್ರಿಯೆಯಾಗಿದೆ. ಕೆಲವು ಕ್ಷೇತ್ರಗಳಲ್ಲಿ ಎಣಿಕೆ ಕಾರ್ಯ ಮುಂದುವರಿದಿದ್ದರೂ, ಒಟ್ಟಾರೆ ಫಲಿತಾಂಶದ ಚಿತ್ರಣವು ಅಮೆರಿಕನ್ನರು ಆಡಳಿತದಲ್ಲಿ ಸ್ಪಷ್ಟವಾದ ಬದಲಾವಣೆಯನ್ನು ಬಯಸಿದ್ದಾರೆ ಎಂಬುದನ್ನು ಖಚಿತಪಡಿಸಿದೆ.

ಅಮೆರಿಕದ ಮತದಾರರು ಈ ನಿರ್ಧಾರಕ್ಕೆ ಬರಲು ಅತ್ಯಂತ ಬಲವಾದ ಹಾಗೂ ತಾರ್ಕಿಕ ಕಾರಣಗಳಿವೆ. ಇದು ಕೇವಲ ಆಡಳಿತ ವಿರೋಧಿ ಅಲೆಯಲ್ಲ, ಬದಲಾಗಿ ಇದೊಂದು ಕಾರ್ಯನೀತಿಗಳ ಮೇಲಿನ ಮೌಲ್ಯಮಾಪನವಾಗಿದೆ. ಸಮಾಜವನ್ನು ವಿಭಜಿಸುವ ವಿಷಯಗಳು ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಆತಂಕ ಸೃಷ್ಟಿಸುವ ನೀತಿಗಳನ್ನು ಜನಸಾಮಾನ್ಯರು ಒಪ್ಪಿಲ್ಲ. ವಿಶೇಷವಾಗಿ ಇರಾನ್ ಮೇಲಿನ ಯುದ್ಧದಂತಹ ಆಕ್ರಮಣಕಾರಿ ವಿದೇಶಾಂಗ ನೀತಿಗಳು ಸಾಮಾನ್ಯ ಜನರಲ್ಲಿ ತೀವ್ರ ಕಳವಳವನ್ನು ಸೃಷ್ಟಿಸಿದ್ದವು. ದೇಶದೊಳಗಿನ ಆರ್ಥಿಕ ಅಸ್ಥಿರತೆ ಮತ್ತು ದೈನಂದಿನ ಸಮಸ್ಯೆಗಳನ್ನು ಬಗೆಹರಿಸುವ ಬದಲು, ಕೇವಲ ಉದ್ವೇಗ ಸೃಷ್ಟಿಸುವ ರಾಜಕೀಯವನ್ನು ಅಮೆರಿಕದ ಮತದಾರರು ತಿರಸ್ಕರಿಸಿದ್ದಾರೆ. ಇದು ವಾಸ್ತವಿಕ ಆಡಳಿತವನ್ನು ಬಯಸುವ ಜನರ ನಿರ್ಧಾರವಾಗಿದೆ.

ಈ ಚುನಾವಣಾ ಹಿನ್ನಡೆಗಳ ನೇರ ಪರಿಣಾಮವಾಗಿ, ಅಮೆರಿಕದ ಪ್ರಬಲ ಮಾಗಾ ( ) ಚಳವಳಿಯ ಒಳಗೆ ಭಾರಿ ಚರ್ಚೆಗಳು ಮತ್ತು ಭಿನ್ನಾಭಿಪ್ರಾಯಗಳು ಮೂಡಿವೆ. ಚುನಾವಣಾ ಸೋಲಿನ ಬೆನ್ನಲ್ಲೇ ನಾಯಕತ್ವದ ನಿರ್ಧಾರಗಳ ಬಗ್ಗೆ ಪಕ್ಷದ ತಳಮಟ್ಟದ ಕಾರ್ಯಕರ್ತರು ಮತ್ತು ಪ್ರಮುಖರು ಪ್ರಶ್ನೆಗಳನ್ನು ಎತ್ತಿದ್ದಾರೆ. ಪಕ್ಷದ ರಾಜಕೀಯ ಕಾರ್ಯತಂತ್ರಗಾರರು ಮತ್ತು ಬೆಂಬಲಿಗರು ಬಹಿರಂಗವಾಗಿಯೇ ವಿಶ್ಲೇಷಣೆ ನಡೆಸುತ್ತಿದ್ದು, ''ನಾಯಕರ ಅತಿರೇಕದ ನಿರ್ಧಾರಗಳು ಮತ್ತು ಮೊಂಡುತನದಿಂದಲೇ ನಮಗೆ ಈ ಸೋಲು ಎದುರಾಯಿತು'' ಎಂದು ಅಭಿಪ್ರಾಯಪಡುತ್ತಿದ್ದಾರೆ. ಮಿತಿಮೀರಿದ ಬೆಲೆ ಏರಿಕೆ, ಹಣದುಬ್ಬರ ಮತ್ತು ಆರ್ಥಿಕ ಮುಗ್ಗಟ್ಟಿನಂತಹ ನೈಜ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ವಿಫಲವಾಗಿ, ಕೇವಲ ಭಾವನಾತ್ಮಕ ವಿಷಯಗಳ ಬೆನ್ನೇರಿದ್ದೇ ಈ ಹಿನ್ನಡೆಗೆ ಮುಖ್ಯ ಕಾರಣ ಎಂದು ಅವರು ವಿಮರ್ಶಿಸುತ್ತಿದ್ದಾರೆ.

ಅಮೆರಿಕದಲ್ಲಿ ಎದುರಾದ ಈ ಚುನಾವಣಾ ಹಿನ್ನಡೆ ಕೇವಲ ಆ ದೇಶದ ಗಡಿಗಳಿಗೆ ಮಾತ್ರ ಸೀಮಿತವಾಗಿಲ್ಲ; ಇದರ ಪರಿಣಾಮ ಯುರೋಪಿನ ರಾಜಕಾರಣದ ಮೇಲೂ ಆವರಿಸಿದೆ. ಫ್ರಾನ್ಸ್, ಜರ್ಮನಿ, ಇಟಲಿ ಮತ್ತು ಬ್ರಿಟನ್‌ನಂತಹ ಪ್ರಮುಖ ರಾಷ್ಟ್ರಗಳ ತೀವ್ರ, ಬಲಪಂಥೀಯ ನಾಯಕರು ಈಗ ಅಮೆರಿಕದ ನಾಯಕರಿಂದ ಆದಷ್ಟು ಅಂತರ ಕಾಯ್ದುಕೊಳ್ಳಲು ಯತ್ನಿಸುತ್ತಿದ್ದಾರೆ. ನಿನ್ನೆ ಮೊನ್ನೆಯವರೆಗೆ ಅಮೆರಿಕದ ನಾಯಕರೊಂದಿಗೆ ಬಹಿರಂಗವಾಗಿ ಬೆಂಬಲ ಸೂಚಿಸುತ್ತಿದ್ದ ಯುರೋಪಿಯನ್ ನಾಯಕರಿಗೆ ಈಗ ಅದೇ ನಂಟಿನಿಂದ ರಾಜಕೀಯ ಹಿನ್ನಡೆಯಾಗುವ ಆತಂಕ ಶುರುವಾಗಿದೆ. ಇರಾನ್ ಯುದ್ಧದಂತಹ ವಿಷಯಗಳಲ್ಲಿ ಅಮೆರಿಕದ ನಿಲುವುಗಳು ಜಾಗತಿಕವಾಗಿ ವಿರೋಧಕ್ಕೆ ಗುರಿಯಾಗಿರುವುದರಿಂದ, ಮುಂಬರುವ ಚುನಾವಣೆಗಳಲ್ಲಿ ಯುರೋಪಿನ ಜನತೆಯೂ ತಮ್ಮನ್ನು ವಿರೋಧಿಸಬಹುದು ಎಂಬ ಆತಂಕ ಅವರನ್ನು ಕಾಡಲಾರಂಭಿಸಿದೆ.

ಯುರೋಪ್ ಮತ್ತು ಉತ್ತರ ಅಮೆರಿಕ ಖಂಡಗಳ ರಾಜಕೀಯ ಪಲ್ಲಟಗಳ ನಡುವೆ, ಲ್ಯಾಟಿನ್ ಅಮೆರಿಕದ ಪ್ರಮುಖ ರಾಷ್ಟ್ರಗಳಲ್ಲೂ ರಾಜಕೀಯ ಬದಲಾವಣೆಯ ಗಾಳಿ ಬೀಸುತ್ತಿದೆ. ಇದಕ್ಕೆ ಅತ್ಯುತ್ತಮ ಉದಾಹರಣೆ ಎಂದರೆ ಬ್ರೆಜಿಲ್ ದೇಶದ ಇತ್ತೀಚಿನ ವಿದ್ಯಮಾನಗಳು. ಬ್ರೆಜಿಲ್‌ನ ಅಧ್ಯಕ್ಷೀಯ ಚುನಾವಣೆಯಲ್ಲಿ ಎಡಪಂಥೀಯ ನಾಯಕ ಲೂಲಾ ಅವರು ಅಲ್ಲಿನ ಪ್ರಬಲ ಸಂಪ್ರದಾಯವಾದಿ ನಾಯಕ ಫ್ಲಾವಿಯೊ ಬೊಲ್ಸೊನಾರೊ ಅವರನ್ನು ಮಣಿಸಿ ಐತಿಹಾಸಿಕ ನಾಲ್ಕನೇ ಅವಧಿಗೆ ಆಯ್ಕೆಯಾಗಿದ್ದಾರೆ. ಇದು ಇಡೀ ಅಮೆರಿಕ ಖಂಡದಲ್ಲಿ ಬಲಪಂಥೀಯ ರಾಜಕೀಯವು ತನ್ನ ಪ್ರಭಾವ ಮತ್ತು ಜನಬೆಂಬಲವನ್ನು ಕಳೆದುಕೊಳ್ಳುತ್ತಿರುವುದಕ್ಕೆ ಮತ್ತೊಂದು ಪ್ರಮುಖ ನಿದರ್ಶನವಾಗಿದೆ. ಬ್ರೆಜಿಲ್‌ನ ಜನತೆ ಕೂಡ ಎಲ್ಲರನ್ನೂ ಒಳಗೊಳ್ಳುವ ಮತ್ತು ಆರ್ಥಿಕತೆಗೆ ಒತ್ತು ನೀಡುವ ರಾಜಕಾರಣವನ್ನು ಸ್ವಾಗತಿಸಿದ್ದಾರೆ.

ಈ ರೀತಿ ಜಾಗತಿಕ ಮಟ್ಟದಲ್ಲಿ ರಾಜಕೀಯ ಒಲವು ಬದಲಾಗಲು ಪ್ರಮುಖ ಕಾರಣವೆಂದರೆ, ಮತದಾರರ ಬದಲಾದ ಆದ್ಯತೆಗಳು ಮತ್ತು ಅವರು ಎದುರಿಸುತ್ತಿರುವ ವಾಸ್ತವದ ಆರ್ಥಿಕ ಸಮಸ್ಯೆಗಳು. ಕಳೆದ ಕೆಲವು ವರ್ಷಗಳಿಂದ ರಾಜಕೀಯ ಪ್ರಚಾರಗಳು ಕೇವಲ ಸೈದ್ಧಾಂತಿಕ ವಿಷಯಗಳನ್ನೇ ನೆಚ್ಚಿಕೊಂಡಿದ್ದವು. ಆದರೆ, ಇಂದಿನ ಮತದಾರರಿಗೆ ದಿನನಿತ್ಯದ ಜೀವನ ನಿರ್ವಹಣೆಯ ವೆಚ್ಚ, ಉತ್ತಮ ಗುಣಮಟ್ಟದ ಆರೋಗ್ಯ ಸೇವೆ, ಕೈಗೆಟಕುವ ವಸತಿ ಸೌಲಭ್ಯ, ಮತ್ತು ಭವಿಷ್ಯದ ಆರ್ಥಿಕ ಭದ್ರತೆಯಂತಹ ನೈಜ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಬೇಕಾಗಿದೆ. ಜನಸಾಮಾನ್ಯರ ಈ ಮೂಲಭೂತ ಮತ್ತು ಆರ್ಥಿಕ ಅಗತ್ಯಗಳನ್ನು ಕಡೆಗಣಿಸಿದ ಸರ್ಕಾರಗಳು ಚುನಾವಣೆಯಲ್ಲಿ ಹಿನ್ನಡೆ ಅನುಭವಿಸಿವೆ. ಕೇವಲ ಭಾಷಣಗಳಿಗಿಂತ ಪ್ರಾಯೋಗಿಕ ಯೋಜನೆಗಳು ಮುಖ್ಯ ಎಂಬುದನ್ನು ಜನತೆ ತೋರಿಸಿಕೊಟ್ಟಿದ್ದಾರೆ.

ರಾಜಕೀಯ ವಿಶ್ಲೇಷಣೆಯ ದೃಷ್ಟಿಯಿಂದ ನೋಡಿದಾಗ, ಕೆಲವು ಕಡೆ ಇದು ಕೇವಲ ಆಡಳಿತ ವಿರೋಧಿ ಅಲೆ (-) ಎಂದು ಕಂಡುಬಂದರೂ, ಇದು ಆಡಳಿತ ವೈಖರಿಯ ಮೌಲ್ಯಮಾಪನವೂ ಹೌದು. ಉದಾಹರಣೆಗೆ, ಬ್ರೆಜಿಲ್‌ನ ಸಂಸತ್ತಿನಲ್ಲಿ ಬಲಪಂಥೀಯ ಶಕ್ತಿಗಳು ಈಗಲೂ ಒಂದಷ್ಟು ಸಂಖ್ಯಾಬಲವನ್ನು ಉಳಿಸಿಕೊಂಡಿವೆ. ಆದರೆ, ಇಡೀ ದೇಶವನ್ನು ಮುನ್ನಡೆಸುವ ಅತ್ಯುನ್ನತ ಕಾರ್ಯಾಂಗದ ಅಧಿಕಾರದಿಂದ ಅವರನ್ನು ಕೆಳಗಿಳಿಸಲಾಗಿದೆ ಎಂದರೆ, ಅವರ ಆಡಳಿತ ವೈಖರಿ ಮತ್ತು ನೀತಿಗಳು ಜನರಿಗೆ ನಿರಾಸೆ ಮೂಡಿಸಿವೆ ಎಂದೇ ಅರ್ಥ. ಸ್ಥಳೀಯ ಮಟ್ಟದಲ್ಲಿ ಕೆಲವು ನಾಯಕರು ಬೆಂಬಲ ಉಳಿಸಿಕೊಂಡರೂ, ಒಟ್ಟಾರೆಯಾಗಿ ಇಡೀ ದೇಶವನ್ನು ಒಗ್ಗೂಡಿಸಿ ಮುನ್ನಡೆಸುವಲ್ಲಿ ಈ ನೀತಿಗಳು ಸವಾಲುಗಳನ್ನು ಎದುರಿಸುತ್ತಿವೆ ಎಂಬುದನ್ನು ಈ ಸರಣಿ ಸೋಲುಗಳು ಜಗತ್ತಿನ ಮುಂದಿಟ್ಟಿವೆ.

ಜಾಗತಿಕವಾಗಿ ಬಲಪಂಥೀಯ ರಾಜಕೀಯವು ಚುನಾವಣಾ ಸವಾಲುಗಳನ್ನು ಎದುರಿಸುತ್ತಿದೆ ಎಂಬ ಈ ಸ್ಪಷ್ಟ ಟ್ರೆಂಡ್‌ಗೆ ಫ್ರಾನ್ಸ್ ನಂತಹ ದೇಶಗಳ ವಿದ್ಯಮಾನಗಳೂ ಹೊರತಾಗಿಲ್ಲ. ಮುಂಬರುವ 2027ರ ಅಧ್ಯಕ್ಷೀಯ ಚುನಾವಣೆಯ ಹಿನ್ನೆಲೆಯಲ್ಲಿ ಬಲಪಂಥೀಯ ನಾಯಕಿ ಮರೀನ್ ಲೆ ಪೆನ್ ಅವರು ಕೆಲವು ಸಮೀಕ್ಷೆಗಳಲ್ಲಿ ಮುಂಚೂಣಿಯಲ್ಲಿದ್ದಾರೆ ಎಂದು ವರದಿಯಾಗಿದ್ದರೂ, ಜಾಗತಿಕ ಮಟ್ಟದಲ್ಲಿ ಕಂಡುಬರುತ್ತಿರುವ ಚುನಾವಣಾ ಹಿನ್ನಡೆಗಳು ಈ ಟ್ರೆಂಡ್‌ನ ಭವಿಷ್ಯದ ಬಗ್ಗೆ ಸ್ಪಷ್ಟ ಸಂದೇಶ ನೀಡಿವೆ. ಅಮೆರಿಕ ಮತ್ತು ಬ್ರೆಜಿಲ್‌ನಂತೆ ಫ್ರಾನ್ಸ್ ಹಾಗೂ ಯುರೋಪಿನ ಜನಸಾಮಾನ್ಯರು ಸಹ ಉದ್ವೇಗದ ರಾಜಕಾರಣಕ್ಕಿಂತ ಆರ್ಥಿಕ ಭದ್ರತೆ ಮತ್ತು ಜೀವನ ನಿರ್ವಹಣೆಯಂತಹ ವಾಸ್ತವಿಕ ಸಮಸ್ಯೆಗಳತ್ತ ಹೆಚ್ಚು ಗಮನ ಹರಿಸುತ್ತಿದ್ದಾರೆ. ಆಡಳಿತಾರೂಢ ಸರ್ಕಾರಗಳ ಆರ್ಥಿಕ ನಿರ್ಧಾರಗಳು ಮತ್ತು ಸ್ಥಳೀಯ ಸಮಸ್ಯೆಗಳ ನಿರ್ವಹಣೆಯ ಆಧಾರದ ಮೇಲೆ ರಾಜಕೀಯ ಒಲವುಗಳು ಬದಲಾಗುತ್ತಿದ್ದು, ಬಲಪಂಥೀಯ ಪಕ್ಷಗಳು ತಮ್ಮ ಜನಪ್ರಿಯತೆಯನ್ನು ಉಳಿಸಿಕೊಳ್ಳಲು ತೀವ್ರ ಹೆಣಗಾಡಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಜನತೆ ವಾಸ್ತವಿಕ ಆರ್ಥಿಕ ಅಭಿವೃದ್ಧಿ ಮತ್ತು ಸಮನ್ವಯದ ರಾಜಕಾರಣವನ್ನು ನಿರೀಕ್ಷಿಸುತ್ತಿರುವುದರಿಂದ, ಜಾಗತಿಕವಾಗಿ ಈ ಸಿದ್ಧಾಂತವು ಕುಸಿತದ ಹಾದಿಯಲ್ಲಿದೆ.

2026ರ ಅಮೆರಿಕ ಮತ್ತು ಬ್ರೆಜಿಲ್‌ನ ಚುನಾವಣಾ ಫಲಿತಾಂಶಗಳು ಜಾಗತಿಕ ಮಟ್ಟದಲ್ಲಿ ರಾಜಕೀಯ ಒಲವಿನ ಬದಲಾವಣೆಯನ್ನು ದೃಢಪಡಿಸಿವೆ. ಡೆಮಾಕ್ರಟರು ಸಾಧಿಸಿದ 255 ಹೌಸ್ ಮತ್ತು 54 ಸೆನೆಟ್ ಸ್ಥಾನಗಳ ಜಯ, ಹಾಗೂ ಬ್ರೆಜಿಲ್‌ನಲ್ಲಿನ ಅಧಿಕಾರ ಬದಲಾವಣೆಯು ಜನಪ್ರಿಯತಾವಾದಿ ಸಿದ್ಧಾಂತವು ಜನಬೆಂಬಲ ಕಳೆದುಕೊಳ್ಳುತ್ತಿರುವುದರ ಸ್ಪಷ್ಟ ನಿದರ್ಶನಗಳಾಗಿವೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕೇವಲ ಸೈದ್ಧಾಂತಿಕ ಧ್ರುವೀಕರಣದ ಆಧಾರದ ಮೇಲೆ ದೀರ್ಘಕಾಲ ಆಡಳಿತ ನಡೆಸಲು ಸಾಧ್ಯವಿಲ್ಲ ಎಂಬುದನ್ನು ಮತದಾರರು ಜಗತ್ತಿಗೆ ಸಾರಿದ್ದಾರೆ. ಜಾಗತಿಕ ರಾಜಕಾರಣವು ಈಗ ಜನಪರ, ಆರ್ಥಿಕ ಅಭಿವೃದ್ಧಿ ಆಧಾರಿತ ಮತ್ತು ಎಲ್ಲರನ್ನೂ ಒಳಗೊಳ್ಳುವ ಸಮನ್ವಯದ ರಾಜಕಾರಣದತ್ತ ದಿಟ್ಟ ಹೆಜ್ಜೆ ಇಡುತ್ತಿರುವುದು ಈ ಫಲಿತಾಂಶಗಳಿಂದ ನಿಚ್ಚಳವಾಗಿ ಸಾಬೀತಾಗಿದೆ.

ಎಸ್‌ಐಆರ್ ಪ್ರಜಾಪ್ರಭುತ್ವದ ಕಾವಲುಗಾರನಿಗೆ ಕನ್ನಡಕ ಬೇಕಿದೆ

ತನ್ನ ನಿಷ್ಪಕ್ಷಪಾತ ಧೋರಣೆಯಿಂದಾಗಿ ಅತ್ಯುನ್ನತ ಗೌರವಕ್ಕೆ ಪಾತ್ರವಾಗಿದ್ದ ಚುನಾವಣೆ ಆಯೋಗ ಇಂದು ತನ್ನ ನಿಷ್ಪಕ್ಷಪಾತತೆಯನ್ನೇ ಜನ ಪರೀಕ್ಷೆಗೆ ಒಡ್ಡಿಕೊಂಡಿದೆ. ಆಯೋಗದ ನಿರ್ಣಯಗಳನ್ನು ಅನುಮಾನಿಸಿ ಬೀದಿ ಹೋರಾಟಗಳು, ಹರತಾಳಗಳು ಭುಗಿಲೆದ್ದಿವೆ. ಇಷ್ಟಕ್ಕೆ, ನಿಲ್ಲದೆ ಮುಖ್ಯ ಚುನಾವಣಾ ಆಯುಕ್ತರ ರಾಜೀನಾಮೆಗೂ ಒತ್ತಾಯಿಸಿ ನಡೆಯುತ್ತಿರುವ ಬೃಹತ್ ಚಳುವಳಿ ಅದರ ಘನತೆಗೆ ಕುಂದುಂಟು ಮಾಡಿದೆ ಚುನಾವಣಾ ಆಯೋಗದ ನಿಷ್ಪಕ್ಷಪಾತತೆ ಮೇಲಿನ ವಿಶ್ವಾಸವನ್ನು ವಿರೋಧ ಪಕ್ಷಗಳು ಅದರಲ್ಲೂ ನಾಗರಿಕ ಸಮಾಜ ವಿಶೇಷವಾಗಿ ಯುವಕರು ಕಳೆದುಕೊಂಡಿದ್ದಾರೆ.

ಒಂದು ಸದೃಢವಾದ ಪ್ರಜಾಸತ್ತಾತ್ಮಕ ಚೌಕಟ್ಟಿನಲ್ಲಿ ಚುನಾವಣೆ ಒಂದು ಮೂಲಾಧಾರವಾಗಿದೆ. ಇದು ದೇಶದ ಆಡಳಿತ ಪಥ ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಅಷ್ಟಲ್ಲದೆ, ಅಮೆರಿಕದ ಮಾಜಿ ಅಧ್ಯಕ್ಷ, ಚಿಂತಕ, ರಾಜನೀತಿಜ್ಞ ಅಬ್ರಾಹಂ ಲಿಂಕನ್ ಚುನಾವಣೆಯ ಕುರಿತಂತೆ, ಚುನಾವಣೆ ಜನರಿಗೆ ಸಂಬಂಧಿಸಿದ್ದು. ಅದು ಅವರ ನಿರ್ಧಾರ. ಇಂತಹ ಭಾವನೆಗಳ ಮೂಲಕ ಈ ತತ್ವಗಳನ್ನು ಒತ್ತಿ ಹೇಳುತ್ತಾರೆ. ಚುನಾವಣೆಯ ಮೂಲಕ ಜನ ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಜನರ ಆಶೋತ್ತರ ಪ್ರತಿನಿಧಿಸುತ್ತಾರೆ ಎಂಬುದನ್ನು ಒತ್ತಿ ಹೇಳುತ್ತಾರೆ. ಹಾಗೆಯೇ ಅವರು ಜನರ ಇಚ್ಛೆಯನ್ನು ಪ್ರತಿಫಲಿಸುವ ನೀತಿಯನ್ನು ಜಾರಿ ಮಾಡುತ್ತಾರೆ, ಒಟ್ಟಾರೆ ಚುನಾವಣೆ ಒಂದು ವಿಧಾನವಾಗಿ ಕಾರ್ಯನಿರ್ವಹಿಸುವ ಮೂಲಕ ಜನರು ರಾಜಕೀಯ ಪ್ರಕ್ರಿಯೆಯಲ್ಲಿ ಭಾಗವಹಿಸುತ್ತಾರೆ. ತನ್ಮೂಲಕ ನೀತಿ ನಿರೂಪಣೆ ಹಾಗೂ ಸಮಾಜ ಹೇಗೆ ಸಾಗಬೇಕೆಂಬ ದಿಕ್ಕನ್ನು ರೂಪಿಸುತ್ತದೆ .

ಹೀಗಾಗಿಯೇ ನಮ್ಮ ದೇಶ ಸಂವಿಧಾನ ಸ್ವೀಕರಿಸಿ ಗಣರಾಜ್ಯ ಆಗುವುದಕ್ಕಿಂತ ಮುನ್ನವೇ ಚುನಾವಣಾ ಆಯೋಗ 1950ರ ಜನವರಿ 25ರಂದು ಜನ್ಮ ತಾಳಿತು. ನಂತರದ ದಶಕಗಳಲ್ಲಿ ಇದೊಂದು ನಿಷ್ಪಕ್ಷಪಾತ ಚುನಾವಣಾ ಕಾವಲು ಸಂಸ್ಥೆಯಾಗಿ ಅತ್ಯುನ್ನತ ಹೆಸರನ್ನು ಗಳಿಸಿತು. ಮತದಾರರ ಅಪಾರ ನಂಬಿಕೆಯನ್ನು ಹೊಂದಿರುವ ಆಯೋಗವು ನಮ್ಮಂತಹ ಬೃಹತ್ ರಾಷ್ಟ್ರದಲ್ಲಿ ವ್ಯವಸ್ಥಿತವಾಗಿ ಚುನಾವಣೆ ನಡೆಸುವುದರ ಮೂಲಕ ವೃತ್ತಿಪರತೆ ಮತ್ತು ದಕ್ಷತೆಗಾಗಿ ಜಗದಗಲ ಪ್ರಶಂಸೆ ಪಡೆದಿದೆ.

ಹೀಗೆ ತನ್ನ ನಿಷ್ಪಕ್ಷಪಾತ ಧೋರಣೆಯಿಂದಾಗಿ ಅತ್ಯುನ್ನತ ಗೌರವಕ್ಕೆ ಪಾತ್ರವಾಗಿದ್ದ ಚುನಾವಣೆ ಆಯೋಗ ಇಂದು ತನ್ನ ನಿಷ್ಪಕ್ಷಪಾತತೆಯನ್ನೇ ಜನ ಪರೀಕ್ಷೆಗೆ ಒಡ್ಡಿಕೊಂಡಿದೆ. ಆಯೋಗದ ನಿರ್ಣಯಗಳನ್ನು ಅನುಮಾನಿಸಿ ಬೀದಿ ಹೋರಾಟಗಳು, ಹರತಾಳಗಳು ಭುಗಿಲೆದ್ದಿವೆ. ಇಷ್ಟಕ್ಕೆ, ನಿಲ್ಲದೆ ಮುಖ್ಯ ಚುನಾವಣಾ ಆಯುಕ್ತರ ರಾಜೀನಾಮೆಗೂ ಒತ್ತಾಯಿಸಿ ನಡೆಯುತ್ತಿರುವ ಬೃಹತ್ ಚಳುವಳಿ ಅದರ ಘನತೆಗೆ ಕುಂದುಂಟು ಮಾಡಿದೆ ಚುನಾವಣಾ ಆಯೋಗದ ನಿಷ್ಪಕ್ಷಪಾತತೆ ಮೇಲಿನ ವಿಶ್ವಾಸವನ್ನು ವಿರೋಧ ಪಕ್ಷಗಳು ಅದರಲ್ಲೂ ನಾಗರಿಕ ಸಮಾಜ ವಿಶೇಷವಾಗಿ ಯುವಕರು ಕಳೆದುಕೊಂಡಿದ್ದಾರೆ.

ದೇಶದ ರಾಜಧಾನಿ ಮಾತ್ರವಲ್ಲದೆ ಪ್ರಮುಖ ನಗರಗಳಲ್ಲಿ ಜನ ಬೀದಿಗಿಳಿದು ತಮ್ಮ ಆಕ್ರೋಶ ಹೊರಹಾಕುತ್ತಿದ್ದಾರೆ. ಇದೇ ಹೊತ್ತಲ್ಲಿ ಸಾಮೂಹಿಕವಾಗಿ ಮತದಾರರ ಹಕ್ಕನ್ನು ಇಲ್ಲದಂತೆ ಮಾಡುವ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯವನ್ನು ಕೈ ಬಿಡುವಂತೆ ಒತ್ತಾಯಿಸಲಾಗುತ್ತಿದೆ. ಇದಕ್ಕೆ ಕಾರಣ ಕೇಂದ್ರ ಸರ್ಕಾರದ ಪರವಾಗಿ ಆಯೋಗ ಕೆಲಸ ಮಾಡುತ್ತಿದೆ ಎಂಬ ಅನುಮಾನದಿಂದ ಆಯೋಗದ ವಿಶ್ವಾಸಾರ್ಹತೆ ಜನರ ಮನದಲ್ಲಿ ಕುಸಿತ ಕಂಡಿದೆ.

ಇಲ್ಲಿ ಭಾರತೀಯ ಚುನಾವಣಾ ಆಯೋಗದ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ತನ್ನ ಹಠದಂತೆಯೇ ನಡೆಸುತ್ತಿದ್ದಾರೆ ಎಂದು ಆಯೋಗದ ಉಳಿದಿಬ್ಬರು ಸದಸ್ಯರು ಮಾಡಿರುವ ಆಪಾದನೆಯನ್ನು ಆಂಗ್ಲದೈನಿಕ ಒಂದು ಬಹಿರಂಗಗೊಳಿಸಿತ್ತು. ಪತ್ರಿಕಾ ವರದಿ ಹೊರಬಂದ ಕೆಲವೇ ಗಂಟೆಗಳಲ್ಲಿ ನಿರೀಕ್ಷೆಯಂತೆ ಕೆಲ ಪತ್ರಕರ್ತರು, ಸುದ್ದಿವಾಹಿನಿಗಳು ಮತಪರಿಷ್ಕರಣೆ ಸೇರಿದಂತೆ ಎಲ್ಲಾ ಬಗೆಯ ತೀರ್ಮಾನಗಳನ್ನು ಸರ್ವಾನುಮತದಿಂದ ಮಾಡಲಾಗಿದೆಯೇ ಎಂದು ಪ್ರಶ್ನಿಸುವ ಮೂಲಕ ಶೋಧನೆಗೆ ಇಳಿದಿದ್ದವು. ಅಂದಹಾಗೆ, ನಾನಿಲ್ಲಿ ದೇಶದ ಪತ್ರಿಕೋದ್ಯಮದ ಸ್ಥಿತಿಗತಿಯ ಕುರಿತು ಹೇಳುತ್ತಿಲ್ಲ, ಬದಲಿಗೆ ನಮ್ಮ ದೇಶದ ಚುನಾವಣಾ ಆಯೋಗದಲ್ಲಿ ಪಾರದರ್ಶಕತೆ ಮತ್ತು ನಿಷ್ಠೆಯ ಬಗ್ಗೆ ಎದ್ದಿರುವ ಕೊರತೆಯ ಬಗ್ಗೆ ಹೇಳಲು ಪ್ರಯತ್ನಿಸುತ್ತಿರುವೆ. ಇಲ್ಲಿ ನನಗೆ ಮಾತ್ರವಲ್ಲ ಮಾಧ್ಯಮ ಕ್ಷೇತ್ರದಲ್ಲಿರುವ ಎಲ್ಲರಿಗೂ ಹಾಗೂ ಯಾವೊಬ್ಬ ಮತದಾರ ತನ್ನ ಮತದಾನದ ಹಕ್ಕಿನಿಂದ ವಂಚಿತನಾಗದಂತೆ ನೋಡಿಕೊಳ್ಳುವ ಜವಾಬ್ದಾರಿ ಆಯೋಗದ ಮೇಲಿದೆ. ಇಂತಹ ಹೊಣೆಗಾರಿಕೆ ಮರೆತು ನಮ್ಮಲ್ಲಿ ಕೆಲವರು ತಾವು ಸಾಮಾನ್ಯರಲ್ಲಿ ಮೊದಲಿಗ ಎಂಬ ಪ್ರತಿಷ್ಠೆ ಹೊತ್ತು ಮೆರೆಯುತ್ತಿದ್ದಾರೆ. ಬಹುಶಃ ಇವರು ತಾವೇ ಏಕಮೇವಾದ್ವಿತೀಯ ಎಂಬ ಹುಂಬ ಮನಸ್ಥಿತಿಯಲ್ಲಿದ್ದಾರೆ.

ಅದೊಂದು ಮಧ್ಯಾಹ್ನ ಭಾರತೀಯ ಚುನಾವಣಾ ಆಯೋಗ ಒಂದು ಪುಟದ ಪತ್ರಿಕಾ ಪ್ರಕಟಣೆ ಬಿಡುಗಡೆ ಮಾಡಿತ್ತು. ಅದು ನಿರೀಕ್ಷೆಯಂತೆ ಚುನಾವಣಾ ಆಯೋಗದ ಇತರೆ ಆಯುಕ್ತರುಗಳು ಎತ್ತಿದ ಯಾವ ವಿಷಯವು ಅಲ್ಲಿರಲಿಲ್ಲ. ಅಂದು ಅದರಲ್ಲಿ ಬಹಳಷ್ಟು ವಿಷಯಗಳನ್ನು ಚುನಾವಣಾ ಆಯೋಗಕ್ಕೆ ಜೋಡಣೆ ಮಾಡಿದ್ದರು. ನನಗನಿಸುವಂತೆ ಜ್ಞಾನೇಶ್ ಕುಮಾರ್ ಅವರ ಅವಧಿಯಲ್ಲಿ ಮತದಾರರನ್ನು ದೊಡ್ಡ ಪ್ರಮಾಣದಲ್ಲಿ ಪಟ್ಟಿಯಿಂದ ಹೊರ ಹಾಕಲು ಎಸ್‌ಐರ್ಆ ನ್ನು ಸಾಧನವಾಗಿ ಬಳಸಿಕೊಂಡಿರುವ ಸಾಧ್ಯತೆಗಳಿರುವಂತೆ ತೋರುತ್ತದೆ. ಸುದ್ದಿ ವರದಿಗಳಂತೆ ಇಬ್ಬರು ಚುನಾವಣಾ ಆಯುಕ್ತರು ಪ್ರಸಕ್ತ ನಡೆಯುತ್ತಿರುವ ಮತಪರಿಷ್ಕರಣೆ ಬಗ್ಗೆ ತೀವ್ರ ಆಕ್ಷೇಪಗಳನ್ನು ದೇಶದ ಮುಂದೆ ಇಟ್ಟಿದ್ದಾರೆ. ಹೊಸ ಮತದಾರರ ಕುರಿತಾದ ಕ್ರಮಗಳು ಅನಧಿಕೃತ ಮತ್ತು ಕಾನೂನುಬಾಹಿರ ಎಂದು ಸಹ ತೆರೆದಿಟ್ಟಿದ್ದಾರೆ. ಆಯೋಗದ ಅಧಿಕಾರಿಗಳನ್ನು ಕಡೆಗಾಣಿಸಿ ಮತದಾರರ ಡೇಟಾಬೇಸ್ ಪ್ರದೇಶವನ್ನು ದೆಹಲಿಯಲ್ಲಿ ಕೇಂದ್ರೀಕರಿಸುವುದರ ವಿರುದ್ಧ ಎಚ್ಚರಿಕೆಯನ್ನು ಕೂಡ ಕೊಟ್ಟಿದ್ದಾರೆ.

ಹೀಗಾಗಿಯೇ ಗುಣಮಟ್ಟದೊಂದಿಗೆ ಪರಿಮಣಾತ್ಮಕ ಪ್ರಜಾಪ್ರಭುತ್ವಕ್ಕೆ ಚುನಾವಣಾ ಸುಧಾರಣೆ ಹಿಂದೆಂದಿಗಿಂತಲೂ ಇವತ್ತು ಹೆಚ್ಚು ಅಗತ್ಯವಾಗಿದೆ . ಆಗ ಮಾತ್ರ ಅದರ್ಶ ಪ್ರಜಾಪ್ರಭುತ್ವ ಎಂಬುದು ಗಟ್ಟಿಗೊಳ್ಳುತ್ತದೆ. ಅಲ್ಲದೆ ಜಗತ್ತಿನ ಇತರೆ ದೇಶಗಳು ಕೂಡ ನಮ್ಮನ್ನು ಅನುಸರಿಸುತ್ತವೆ. ತಪಸ್ಸಿ ನಂತೆ ಕೂತು ಐಎಎಸ್, ಐಪಿಎಸ್ ಪಾಸು ಮಾಡಿ ಜಿಲ್ಲಾಧಿಕಾರಿ, ಆಯುಕ್ತರಾಗಿ ನೇಮಕಗೊಳ್ಳುವ ಪ್ರತಿಭಾವಂತರು ಅರೆ-ಬರೆ ಓದಿ ಬಂದ ರಾಜಕಾರಣಿಗಳ ಮಾತನ್ನು ಕೇಳಬೇಕಾಗುತ್ತದೆ. ಇದು ನಿಜಕ್ಕೂ ವಿಪರ್ಯಾಸವೇ ಸರಿ. ಇದನ್ನು ನಹಿಸಿಕೊಳ್ಳಬಹುದಾದರೂ ಅತ್ಯಂತ ನಾಚಿಕೆಗೇಡಿತನದ ವಿಚಾರ ಒಂದಿದೆ.

ಅದು ರಾಷ್ಟ್ರಪತಿ ಹಾಗೂ ಉಪರಾಷ್ಟ್ರಪತಿಗಳಂತಹ ಅತ್ಯುನ್ನತ ಹುದ್ದೆಗಳಿಗೆ ಚುನಾವಣೆ ನಡೆದಾಗಲೂ ಮತಗಳಲ್ಲಿ ಅಸಿಂಧು ಗೊಳ್ಳುತ್ತಿವೆ. 2022ರಲ್ಲಿ ನಡೆದ ರಾಷ್ಟ್ರಪತಿ ಚುನಾವಣೆಯಲ್ಲಿ ಸುಮಾರು 53 ಮತಗಳು ಅಸಿಂಧು ಗೊಂಡಿದ್ದವು. ಗೊತ್ತಿರಲಿ, ಇಲ್ಲಿ ಮತ ಚಲಾಯಿಸುವವರು ಅನಕ್ಷರಸ್ಥರಲ್ಲ. ಬದಲಿಗೆ ಅವರು ನಮ್ಮನ್ನಾಳುವ ಶಾಸಕರು, ಸಂಸದರಾಗಿದ್ದಾರೆ. ಇದಕ್ಕಾಗಿ ಭಾರತೀಯ ಆಡಳಿತ ಪೊಲೀಸ್ ಸೇವೆಯಂತೆ ರಾಜಕೀಯ ಸೇವೆಯನ್ನು ತೆರೆಯುವ ಅಗತ್ಯವಿದೆ, ಆಗ ಸಹಜವಾಗಿ ಕೌಟುಂಬಿಕ ರಾಜಕಾರಣ ಕೂಡ ಕೊನೆಗೊಳ್ಳಬಹುದು. ದುರಂತ ಎಂದರೆ, ಇತ್ತೀಚೆಗೆ ನಡೆದ ಶಿಕ್ಷಕರ ಮತ್ತು ಪದವೀಧರರ ಕ್ಷೇತ್ರದ ಚುನಾವಣೆಯಲ್ಲಿ ಸಹ 34,051 ಮತಗಳು ತಿರಸ್ಕೃತಗೊಂಡಿವೆ. ಹೌದು, ನಮ್ಮಲ್ಲಿ ರಾಜಕಾರಣಿಗಳು ರಾಜಕಾರಣವನ್ನು ಕುಟುಂಬದ ವ್ಯವಹಾರ ಎಂಬಂತೆ ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ.

ಇವರು ಇಂದಿಗೂ ಜನಸೇವೆಯನ್ನು ಸಾಧನ ಎಂದು ಭಾವಿಸೇ ಇಲ್ಲ. ಒಂದೊಮ್ಮೆ ರಾಜಕಾರಣಕ್ಕೆ ಧುಮುಕಿರುವ ಸಸಿಕಾಂತ್ ಸೆಂಥಿಲ್ ಅವರಂತಹ ಅಧಿಕಾರಿಗಳು ಸಚಿವರಾಗಿ ನೇಮಕಗೊಂಡರೆ, ಅಸಾಧಾರಣವಾದಂತಹ ಸೇವೆ ಮಾಡಬಹುದು. ಇದೇ ಹೊತ್ತಲ್ಲಿ, ಕಡಿಮೆ ಶಿಕ್ಷಣ ಹೊಂದಿರುವ ಸಚಿವರನ್ನು ಮತ್ತೊಮ್ಮೆ ಸಚಿವರನ್ನಾಗಿ ಆಯ್ಕೆ ಮಾಡುವುದಿಲ್ಲ. ಕಾರಣ ಇವರು ಸಚಿವರಾಗಿ ಮಾಡಿರುವ ಸಾಧನೆ ಕಳಪೆ ಮಟ್ಟದಿಂದ ಕೂಡಿರುತ್ತದೆ. ಹಾಗಂತ ಕಾಮರಾಜರಂತಹ ಮುಖ್ಯಮಂತ್ರಿಯವರ ಕೊಡುಗೆಯನ್ನು ಇತಿಹಾಸ ಮರೆಯಲು ಸಾಧ್ಯವಿಲ್ಲ. ಇಷ್ಟಲ್ಲದೆ, ನಮ್ಮ ವಿಸ್ತ್ರತ ಶೈಲಿಯ ಚುನಾವಣಾ ಸುಧಾರಣೆಯನ್ನು ಸಹ ಅನುಷ್ಠಾನಗೊಳಿಸುವ ಅಗತ್ಯವಿದೆ.

ಇದಕ್ಕಾಗಿ ರಾಜಕೀಯ ಒಮ್ಮತಕ್ಕೆ ಕಾಯುವ ಅಗತ್ಯವಿಲ್ಲ. ಇದಕ್ಕೆ ಜಾರ್ಜ್ ಫರ್ನಾಂಡಿಸ್ ಪ್ರಕರಣವನ್ನು ಉದಾಹರಣೆಯನ್ನಾಗಿ ಕೊಡಬಹುದಾಗಿದೆ. ಇವರು ತಮ್ಮ ಸ್ಮರಣಶಕ್ತಿಯನ್ನು ಕಳೆದುಕೊಂಡರೂ ರಾಜ್ಯಸಭೆಗೆ ಹೋಗಿದ್ದರು. ಹೀಗಾಗಿ ಚುನಾವಣೆ ಪೂರ್ವದಲ್ಲಿ ಉಮೇದು ವಾರರು ವೈದ್ಯಕೀಯ ಫಿಟ್ನೆಸ್ ಪ್ರಮಾಣ ಪತ್ರವನ್ನು ಹಾಜರುಪಡಿಸುವುದನ್ನು ಕಟ್ಟುನಿಟ್ಟಾಗಿ ಪರಿಶೀಲಿಸುವಂತಾಗಬೇಕಿದೆ. ಕೆಲವೊಂದು ಮಾಹಿತಿಯ ಮೂಲಗಳಂತೆ ಜಾರ್ಜ್ ಫರ್ನಾಂಡಿಸ್ ಅವರು ಪ್ರಮಾಣ ವಚನ ತೆಗೆದುಕೊಳ್ಳಲು ಶಕ್ತರಾಗಿರಲಿಲ್ಲ. ಆಗವರ ಬದಲು ಅವರ ಸಹೋದ್ಯೋಗಿ ಶಿವಾನಂದ ತಿವಾರಿ ಅವರು ಪ್ರಮಾಣವನ್ನು 2009ರ ಆಗಸ್ಟ್ 4 ರಂದು ಪಡೆದಿದ್ದರು.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR